ಶ್ರೀ ಬಿ.ಹೆಚ್. ಬನ್ನಿಕೋಡ್ (ಹಿರೇಕೆರೂರು) : ಮಾನ್ಯ ಅಧ್ಯಕ್ಷರೆ, ಶಾಸಕರಾದ ನಾವು ಇಲ್ಲಿ ಭಾಷಣ ಮಾಡುವಾಗ ಯಾವ ಮಸೂದೆಗಳು ಅವಧಿ ಮುಗಿದಿವೆ, ಯಾವುದನ್ನು ತೆಗೆದು ಹಾಕುತ್ತಿದ್ದೀರಿ, ಯಾವುದು ತಿದ್ದುಪಡಿಯಾಗಿ ಅಮಲಿನಲ್ಲಿ ಬಂದಿಲ್ಲ, ಜಾರಿಯಲ್ಲಿ ಕೊಡುತ್ತಿದ್ದೀರಿ ಎಂದು ಶಾಸಕರ ಗಮನಕ್ಕೆ ಬರುವುದಕ್ಕೆ ಒಂದು ಯಾದಿ ಆದರೂ ಕೊಡಿ. ಇಂತಿಂಥ ಕಾನೂನು ಮುಗಿದು ಹೋಗಿದೆ, ಇಂತಿಂತಹ ಅಮೆಂಡ್‌ಮೆಂಟ್ ಆಗಿದೆ ಎನ್ನುವುದನ್ನು ಶಾಸಕರ ಗಮನಕ್ಕೆ ತಂದರೆ ಈ ಶಾಸನಸಭೆಯಲ್ಲಿ ಏನು ಮಾಡುತ್ತಿದ್ದೆವೆಂದು ನಮಗೆ ತಿಳುವಳಿಕೆ ನೀಡುವ ಉದ್ದೇಶದಿಂದ ಕೊಟ್ಟರೆ ಒಳ್ಳೆಯದು. ಈಗ ಇದನ್ನು ಪಾಸ್ ಮಾಡುವುದಕ್ಕೆ ಅಡ್ಡಿ ಇಲ್ಲ.

ಶ್ರೀ ಪಿ.ಜಿ.ಆರ್. ಸಿಂಧ್ಯಾ : ಸಾವಿರ ತಿದ್ದುಪಡಿಗಳನ್ನು ನಿರಸನಗೊಳಿಸತಕ್ಕಂಥದ್ದು 1999ರಲ್ಲಿ ನಾವು ಒಂದು ಕಾನೂನು ತಿದ್ದುಪಡಿ ತೆಗೆದುಕೊಂಡು ಬರುತ್ತೇವೆ, ಅದರಲ್ಲಿ ಎರಡು ವರ್ಷದ ಬದಲಾಗಿ ಮೂರು ವರ್ಷ ಎಂಬ ಪದಗಳನ್ನು ಯಾವಾಗಲೂ ಪ್ರತಿಯೋಚಿಸಲಾಗಿದೆ ಎಂದು ಭಾವಿಸತಕ್ಕದ್ದು. ಎಂದರೆ ಎರಡರ ಬದಲಿಗೆ ಮೂರು ವರ್ಷ ಎಂದು ಮಾಡುವುದು. ಅದರ ಫೈನಾನ್ಷಿಯಲ್ ಇಂಪ್ಲಿಕೇಷನ್ಸ್ ಏನೆಂದು ನಮಗೆ ಗೊತ್ತಿಲ್ಲ to be very frank. ಇದು ಏನಾಗುತ್ತದೆ ಎಂದು ನೋಡಿದರೆ ಭೈರೇಗೌಡರು ಕೃಷಿ ಇಲಾಖೆ ಬಗ್ಗೆ ಮಾತನಾಡಿದಾಗ 714 ಐಟಂಗಳನ್ನು ತರಿಸಿಕೊಳ್ಳುವುದಕ್ಕೆ ಇದ್ದಂತಹ ಕ್ವಾಂಟಂ ರಿಸ್ಟ್ರಿಕ್ಷನ್ಸ್ ತೆಗೆದು ಹಾಕಿದ್ದೀರಿ. ಬ್ಯೂರೋಕ್ರಾಟ್ ತೆಗೆದುಕೊಂಡು ಬಂದರು. ಮಂತ್ರಿಗಳು ಸಹಿ ಹಾಕಿದರು. ಪಾರ್ಲಿಮೆಂಟಿನಲ್ಲಿ ಪಾಸ್ ಆಯಿತು. ನಾನು ಮೊನ್ನೆ ದೆಹಲಿಗೆ ಹೋದಾಗ ತಜ್ಞರ ಜೊತೆ ಮಾತನಾಡಿದಾಗ ನಾವು ತಪ್ಪು ಮಾಡಿದ್ದೇವೆ ಅದನ್ನು ಸರಿಯಾಗಿ ಗಮನಿಸಬೇಕಾಗಿತ್ತು ಎಂದು ಹೇಳಿದರು. ಅದು ಹಾಗೆ ಆಗುವುದು ಬೇಡವೆಂದು ನಾವು ಹೇಳಿದ್ದು. ಎರಡು ದಿನ ತಡೆ ಹಿಡಿಯಿರಿ ಏನೆಂದು ನೋಡೋಣ. ಆದಾದಮೇಲೆ ಮಾಡೋಣ. ಈಗ ಕೊರಗರ ವಿಧೇಯಕವನ್ನು ನಾವು ಸ್ವಾಗತ ಮಾಡುತ್ತೇವೆ. ಅದನ್ನು ಇವತ್ತೇ ಬೇಕಾದರೆ ಪಾಸ್ ಮಾಡಿ ನಾವು ಬೇಡ ಎನ್ನುವುದಿಲ್ಲ. ರಾಜ್ಯದ ಹಿತದೃಷ್ಟಿಯಿಂದ ನಾವು ತಿಳಿದುಕೊಳ್ಳುವುದರಲ್ಲಿ ತಪ್ಪೇನಿದೆ? ಕಾನೂನುಗಳನ್ನು ಮಾಡತಕ್ಕಂತಹ ವಿಚಾರದಲ್ಲಿ ಮಾತ್ರ ಚರ್ಚೆಗಳು ಆಗಲೇಬೇಕು.

MR. SPEAKER : We will take it up tomorrow ಈಗ ಸಮಾಜ ಕಲ್ಯಾಣ ಇಲಾಖಾ ಸಚಿವರು ವಿಧೇಯಕವನ್ನು ಸೂಚಿಸುವುದು.

ಕರ್ನಾಟಕ ಕೊರಗರ (ಆಜಲು ಪದ್ಧತಿ ನಿಷೇಧ) ವಿಧೇಯಕ, 2000

ಪರ್ಯಾಲೋಚನಾ ಪ್ರಸ್ತಾವ

+ ಶ್ರೀ ಕಾಗೋಡು ತಿಮ್ಮಪ್ಪ (ಸಮಾಜ ಕಲ್ಯಾಣ ಸಚಿವರು) : ಮಾನ್ಯ ಅಧ್ಯಕ್ಷರೆ, 2000,ದ ಕರ್ನಾಟಕ ಕೊರಗರ (ಆಜಲು ಪದ್ಧತಿ ನಿಷೇಧ) ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.

ಪ್ರಸ್ತಾವವನ್ನು ಮಂಡಿಸಲಾಯಿತು

ಶ್ರೀ ಕಾಗೋಡು ತಿಮ್ಮಪ್ಪ (ಸಮಾಜ ಕಲ್ಯಾಣ ಸಚಿವರು) : ಮಾನ್ಯ ಅಧ್ಯಕ್ಷರೆ, ಅಜಲು ಪದ್ಧತಿಯೆಂದು ಒಂದು ವ್ಯವಸ್ಥೆ ಮಂಗಳೂರು ಮತ್ತು ಉಡುಪಿ ಜಿಲ್ಲೆಯಲ್ಲಿ ಇದೆ. ಇದನ್ನು ಅನುಸರಿಸತಕ್ಕಂತಹ ಜನ ಆದಿವಾಸಿಗಳ ಬುಡಕಟ್ಟಿಗೆ ಸೇರಿದ, ಪರಿಶಿಷ್ಟ ವರ್ಗದ ಕೊರಗ ಜನಾಂಗದವರು ಈ ಪದ್ಧತಿಯನ್ನು ಅನುಸರಿಸುತ್ತಾರೆ. ಇಷ್ಟು ನಾಗರೀಕತೆ ಬೆಳೆದರೂ ಕೂಡ ಇಂತಹ ಒಂದು ಅನಿಷ್ಟ ಪದ್ಧತಿ ಅಲ್ಲಿ ಇನ್ನೂ ಜೀವಂತವಾಗಿದೆ. ಇದನ್ನು ತೆಗೆದು ಹಾಕಬೇಕು ಎನ್ನತಕ್ಕಂಥ ಒತ್ತಾಯವನ್ನು ಆ ಭಾಗದ ಜನ, ವಿದ್ಯಾವಂತರು ಮತ್ತು ವಿಚಾರವಂತರು ಆಗಿಂದಾಗ್ಗೆ ಮಾಡುತ್ತಿದ್ದಾರೆ.

ಅಜಲು ಪದ್ಧತಿ ನಿರ್ಮೂಲನೆಗೆ ಇಂದು ಕೆಲವು ವಿದ್ಯಾವಂತರು ಮತ್ತು ವಿಚಾರವಂತರು ಅಲ್ಲಿಯ ಜನರಿಗೆ ತಿಳಿಹೇಳುತ್ತಿದ್ದಾರೆ. ಇದರ ಜೊತೆಗೆ ಈಗ ಸುಗ್ರೀವಾಜ್ಞೆ ಮುಖಾಂತರ ಈ ಪದ್ಧತಿ ಕೊನೆಗಾಣಿಸುವ ಸಲುವಾಗಿ ಮಸೂದೆಯನ್ನು ತಂದಿದ್ದೇವೆ. ಅಜಲು ಪದ್ಧತಿ ಎನ್ನತಕ್ಕಂಥದ್ದು ವಿಶೇಷವಾಗಿ ದಕ್ಷಿಣ ಕನ್ನಡ ಹಾಗೂ ಉಡುಪಿಯಲ್ಲಿ ಕೆಲವರು ಪೂಜೆ ಮಾಡುತ್ತಾರೆ. ಆ ಪೂಜೆಗೆ ಕೆಲವು ಕ್ರಮಗಳನ್ನು ಅನುಸರಿಸಬೇಕಾಗುತ್ತದೆ. ಆ ಕ್ರಮಗಳನ್ನು ಈ ಕೊರಗ ಜನಾಂಗದವರು ಮಾಡಬೇಕು. ಕೆಲವರು ಬಲಿ ಪೂಜೆಯನ್ನು ಮಾಡುತ್ತಾರೆ. ಆ ಪೂಜೆಗೆ ಇಟ್ಟ ನೈವೇದ್ಯದ ಅನ್ನ, ಆ ಅನ್ನದ ಜೊತೆಗೆ ಕೆಲವು ಕೂದಲುಗಳನ್ನು ಮತ್ತು ಉಗುರುಗಳನ್ನು ಬೆರೆಸಿರುತ್ತಾರೆ. ಆ ಅನ್ನವನ್ನು ಕೊರಗರು ತಿನ್ನಬೇಕು. ಅದೇ ರೀತಿಯಲ್ಲಿ ಆ ಭಾಗದಲ್ಲಿ ಕಂಬಳ ಕ್ರೀಡೆಯಲ್ಲಿ ಕೋಣಗಳನ್ನು ಓಡಿಸುವುದು ತಮಗೆಲ್ಲರಿಗೂ ತಿಳಿದೇ ಇದೆ. ಆ ಕೋಣಗಳು ಓಡುವ ಕೆಸರಿನ ಜಾಗದಲ್ಲಿ ಯಾರಾದರೂ ಶತ್ರುಗಳು ಗೂಟ ಇಟ್ಟು ಮೋಸ ಮಾಡುವ ಸಂದರ್ಭ ಬರಬಹುದೆನ್ನುವ ಕಾರಣದಿಂದ ಆ ಕೆಸರಿನ ಜಾಗದಲ್ಲಿ ಕೋಣ ಓಡುವ ಮೊದಲು ಈ ಕೊರಗರು ಓಡಬೇಕಾದ ಪದ್ಧತಿ ಅಲ್ಲಿದೆ. ಈ ರೀತಿಯಲ್ಲಿ ಓಡುವ ಸಂದರ್ಭದಲ್ಲಿ ಈ ಜನರು ಅತ್ಯಂತ ಕಠಿಣ ಪರಿಸ್ಥಿತಿಗೆ ಸಿಲುಕುವ ಸಂದರ್ಭಗಳಿರುತ್ತವೆ. ಇಂಥ ಅನಿಷ್ಟ ಪದ್ಧತಿ ಆ ಭಾಗದಲ್ಲಿ ಜಾರಿಯಲ್ಲಿವೆ. ಇಂಥ ಆಧುನಿಕ ಕಾಲದಲ್ಲಿಯೂ ಇಂಥ ಪದ್ಧತಿಯನ್ನು ಉಳಿಸಿಕೊಂಡು ಬರುವುದು ಯಾವ ರೀತಿಯಲ್ಲೂ ನ್ಯಾಯವಾದುದಲ್ಲ. ಆದರೆ ಆ ಸಮಾಜದ ಕುರುಡುತನ, ಅಜ್ಞಾನ, ಅನಕ್ಷರತೆಯ ಕಾರಣದಿಂದ ಇವೊತ್ತಿಗೂ ಆ ಪದ್ಧತಿ ಜೀವಂತವಾಗಿ ಉಳಿದುಕೊಂಡು ಬಂದಿವೆ. ಕೆಲವು ಮೇಲ್ವರ್ಗದ ಜನರೂ ಕೂಡ ದೇವರ ಹೆಸರಿನಿಂದ, ಧಾರ್ಮಿಕತೆಯ ಹೆಸರನ್ನು ಮುಂದಿಟ್ಟುಕೊಂಡು ಈ ಪದ್ಧತಿಗೆ ಪುರಸ್ಕಾರ ಕೊಡುತ್ತಿದ್ದಾರೆಯೇ ವಿನಃ ಇದನ್ನು ನಿಲ್ಲಿಸುವುದಕ್ಕೆ ಮೇಲ್ವರ್ಗದ ಜನಗಳು ಹೆಚ್ಚಿನ ಪ್ರೋತ್ಸಾಹವನ್ನು ಕೊಡುತ್ತಿಲ್ಲ. ಮೇಲ್ವರ್ಗದ ಜನರು ತಮ್ಮ ಧಾರ್ಮಿಕತೆಯ ಹೆಸರಿನಲ್ಲಿ ಇಂಥ ಅನಿಷ್ಠ ಪದ್ಧತಿಗೆ ಕೊರಗರನ್ನು ಬಳಸಿಕೊಳ್ಳುವುದನ್ನು ತಡೆಗಟ್ಟುವ ಸಲುವಾಗಿಯೇ ಇಂದು ಈ ಮಸೂದೆಯನ್ನು ತಂದಿರುವುದು. ಇನ್ನು ಮುಂದೆ ಯಾರಾದರೂ ಇಂಥ ಪದ್ಧತಿಗೆ ಪ್ರೋತ್ಸಾಹ ಕೊಟ್ಟರೆ ಅಥವಾ ಕೊರಗರೆ ಕೂಡ ಸ್ವಯಂಪ್ರೇರಣೆಯಿಂದ ಈ ಪದ್ಧತಿಯ ಆಚರಣೆಗೆ ಹೋದರೂ ಕೂಡ ಅವರಿಗೆ ಶಿಕ್ಷೆ ವಿಧಿಸಲಾಗುವುದು. ಈ ಶಿಕ್ಷೆ ಯಾವುದೆಂದರೆ 5 ವರ್ಷಗಳ ಕಾಲ ಶಿಕ್ಷೆ ವಿಧಿಸಬಹುದಾಗಿದೆ ಅಥವಾ 5 ಸಾವಿರ ರೂಪಾಯಿಗಳ ದಂಡವನ್ನು ವಿಧಿಸಬಹುದಾಗಿದೆ. ಇಂಥ ಒಂದು ಒಳ್ಳೆಯ ಮಸೂದೆಗೆ ಎಲ್ಲರೂ ಅಂಗೀಕಾರ ನೀಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಬಿ. ಸೋಮಶೇಖರ್ (ಮಳವಳ್ಳಿ) : ಮಾನ್ಯ ಅಧ್ಯಕ್ಷರೆ, ಮಾನ್ಯ ಕಾಗೋಡು ತಿಮ್ಮಪ್ಪನವರು ಒಳ್ಳೆಯ ಚಿಂತನೆಯನ್ನು ಮಾಡಿ ಅಜಲು ಪದ್ಧತಿಯಂತಹ ಅನಿಷ್ಟ ಪದ್ಧತಿಯ ನಿರ್ಮೂಲನೆಗೆ ಒಳ್ಳೆಯ ಮಸೂದೆಯನ್ನು ತಂದಿದ್ದಾರೆ. ಅದಕ್ಕಾಗಿ ನಾನು ಅವರನ್ನು ಅಭಿನಂದಿಸಿ, ಮಸೂದೆಗೆ ನಮ್ಮ ಬೆಂಬಲವನ್ನು ಸೂಚಿಸುತ್ತೇನೆ.

ಶ್ರೀ ಪಿ.ಜಿ.ಆರ್. ಸಿಂಧ್ಯಾ (ಕನಕಪುರ) : ಮಾನ್ಯ ಅಧ್ಯಕ್ಷರೆ, ಸರ್ಕಾರದವರು ತಂದಿರುವ ಮಸೂದೆಯನ್ನು ಸ್ವಾಗತಿಸುತ್ತೇನೆ. ಇಂದು ನಮ್ಮ ಸಮಾಜದಲ್ಲಿ ವಿಶೇಷವಾಗಿ ದುರ್ಬಲ ವರ್ಗದವರನ್ನು, ಬಡವರನ್ನು ಮೂಢ ನಂಬಿಕೆಗಳ ಆಚರಣೆಗೆ ಬಳಸಿಕೊಳ್ಳುತ್ತಿರುವ ಉದಾಹರಣೆಗಳು ಇನ್ನೂ ಇವೆ. ಈ ಅಜಲು ಪದ್ಧತಿ ನಿರ್ಮೂಲನೆಗೆ ಮಸೂದೆಯನ್ನು ನಾವೇ ಬಹಳ ಹಿಂದೆಯೇ ಮಾಡಬೇಕಾಗಿತ್ತು. ಮಾನ್ಯ ಕಾಗೋಡು ತಿಮ್ಮಪ್ಪನವರು ಗಮನಿಸಿ ಅವರು ಸಮಾಜ ಕಲ್ಯಾಣ ಮಂತ್ರಿಗಳಾದ ಮೇಲೆ ಈ ಅಜಲು ಪದ್ಧತಿ ಆಚರಣೆಗೆ ಪ್ರೋತ್ಸಾಹ ಕೊಡುವವರಿಗೆ ಜುಲ್ಮಾನೆ ವಿಧಿಸತಕ್ಕಂಥ ಹಾಗೂ ಶಿಕ್ಷೆಯನ್ನು ವಿಧಿಸಲು ಈ ಮಸೂದೆಯಲ್ಲಿ ಅವಕಾಶ ಮಾಡಿಕೊಟ್ಟಿರತಕ್ಕಂಥ ವಿಚಾರ ಎಲ್ಲರೂ ಸ್ವಾಗತಾರ್ಹ ಮಾಡತಕ್ಕಂಥದ್ದೇ ಆಗಿದೆ. ಇದರ ಜೊತೆಗೆ ಮಾನ್ಯ ಮಂತ್ರಿಗಳಲ್ಲಿ ನನ್ನದೊಂದು ಮನವಿ ಏನೆಂದರೆ ಇಂದಿಗೂ ಕೂಡ ಕೆಲವು ಗ್ರಾಮೀಣ ಪ್ರದೇಶಗಳಲ್ಲಿ ಹಬ್ಬ ಹರಿದಿನಗಳಲ್ಲಿ, ಜಾತ್ರೆಗಳಲ್ಲಿ ಮನುಷ್ಯರಿಗೆ ಹಿಂಸೆ ಕೊಡತಕ್ಕಂಥ ಪದ್ಧತಿ ನಡೆಯುತ್ತಿದೆ, ಉದಾಹರಣೆಗೆ ಹೇಳಬೇಕೆಂದರೆ ಮುಸಲ್ಮಾನರು ಮಾಡುವ ದಾಬಯ್ಯನ ಹಬ್ಬದಲ್ಲಿ ಮೆರವಣಿಗೆ ಮಾಡುವಾಗ ದೊಡ್ಡ ದೊಡ್ಡ ಕಬ್ಬಿಣದ ಕಡ್ಡಿಗಳನ್ನು ನಾಲಿಗೆಯಲ್ಲಿ ಚುಚ್ಚಿಕೊಳ್ಳುವುದು ಹಾಗೂ ಕೆನ್ನೆಯ ಒಳಗಡೆಯಿಂದ ಈಚೆಗೆ ಬರುವ ಹಾಗೆ ಕಬ್ಬಿಣದ ಕಡ್ಡಿಯನ್ನು ಚುಚ್ಚಿಕೊಳ್ಳುವ ರೀತಿ ನೋಡಿದರೆ ಭಯಾನಕವಾಗಿಯೇ ಇರುತ್ತದೆ. ಇದರ ಜೊತೆಗೆ ಅಪಾಯಕ್ಕೆ ಎಡೆಮಾಡಿಕೊಡುವ ಇನ್ನೂ ಹಲವಾರು ಪದ್ಧತಿಗಳು ನಮ್ಮಲ್ಲಿ ಇನ್ನೂ ಇವೆ. ಈ ಸಂಪ್ರದಾಯಗಳಿಗೆಲ್ಲ ದುರ್ಬಲ ಹಾಗೂ ಬಡವರ್ಗದ ಜನರೇ ಬಳಕೆಯಾಗುತ್ತಿರುವುದರಿಂದ ಇಂಥ ಪದ್ಧತಿಗಳು ಎಲ್ಲೆಲ್ಲಿ ಇದೆಯೋ ಅದನ್ನು ನಿರ್ಮೂಲನೆ ಮಾಡುವುದಕ್ಕೆ ಮಂತ್ರಿಗಳು ಕ್ರಮ ತೆಗೆದುಕೊಳ್ಳಬೇಕು. ಮಾನ್ಯ ಮಂತ್ರಿಗಳ ಜಿಲ್ಲೆಯಲ್ಲಿಯೇ ಬೆತ್ತಲೆ ಸೇವೆಯನ್ನು ನಿಲ್ಲಿಸಲು ಹೋದ ಅಧಿಕಾರಿಗಳನ್ನು ಅಲ್ಲಿಯ ಜನರು ಯಾವ ರೀತಿಯಲ್ಲಿ ನೋಡಿಕೊಂಡರು ಎಂಬುದು ಅವರಿಗೇ ತಿಳಿದಿದೆ. ಕಾನೂನಿನ ಮೂಲಕ ಯಲ್ಲಮ್ಮನ ಸಲುವಾಗಿ ಬೆತ್ತಲೆ ಸೇವೆ ಮಾಡುವುದನ್ನು ನಿಷೇಧ ಮಾಡಿದ್ದೇವೆ. ಆದರೂ ಕೂಡ ಆಡಳಿತ ನಡೆಸುವ ಜನರಿಗೆ ಗೊತ್ತಾಗದ ರೀತಿಯಲ್ಲಿ ಕೆಲವು ಕಡೆ ಬೆತ್ತಲೆ ಸೇವೆ ನಡೆಯುತ್ತಿರುವ ವಿಷಯ ಕೂಡ ಇದೆ. ಆದುದರಿಂದ ಇದನ್ನು ಎನ್‌ಫೋರ್ಸ್ ಮಾಡತಕ್ಕಂಥದ್ದು ಬಹಳ ಅವಶ್ಯಕತೆ ಇದೆ. ಜನರಿಗೆ ಇದರ ಬಗ್ಗೆ ಎಜುಕೇಟ್ ಮಾಡಬೇಕಾದ ಅವಶ್ಯಕತೆ ಕೂಡ ಇದೆ. ಅದೇನೇ ಇದ್ದರೂ ಕೂಡ ಇಂದು ತಂದಿರುವ ಮಸೂದೆಗೆ ನಮ್ಮ ಬೆಂಬಲವಿದೆ. ಇದರ ಜೊತೆಗೆ ಮತ್ತೊಂದು ವಿಷಯವೆಂದರೆ ಇಂಥ ಇನ್ನಿತರ ಪದ್ಧತಿಗೆ ಸಂಬಂಧಪಟ್ಟಂತೆ ಗೃಹ ಇಲಾಖೆಯ ವ್ಯಾಪ್ತಿಗೆ ಬರುವ ಸೂಪರಿನ್ಟೆಂಡೆಂಟ್ ಆಫ್ ಪೋಲಿಸ್‌ರವರಿಗೆ ಎಲ್ಲಾ ಮಾಹಿತಿಗಳು ಗೊತ್ತಿರುತ್ತದೆ. ಆದರೆ ಅವರು ಅನಿವಾರ್ಯ ಕಾರಣಗಳಿಂದಾಗಿ ಸುಮ್ಮನಿರಬಹುದು. ಉದಾಹರಣೆಗೆ ಕೋಣಗಳನ್ನು ಕತ್ತರಿಸತಕ್ಕಂಥದ್ದು, ದನಗಳನ್ನು ಕತ್ತರಿಸತಕ್ಕಂಥ ವಿಚಾರಗಳಿಂದಾಗಿಯೇ ಜನರಲ್ಲಿ ಸಂಘರ್ಷ ಉಂಟಾಗುವ ಪ್ರಸಂಗಗಳು ಇರುತ್ತವೆ. ಕೆಲವು ಕಡೆ

ನರಬಲಿಯನ್ನು ಕೊಟ್ಟು ರಕ್ತವನ್ನು ದೇವರಿಗೆ ನೈವೇದ್ಯಕ್ಕೆ ಇಡುತ್ತಾರೆ ಎಂಬುದನ್ನು ಕೂಡ ನಾವು ಕೇಳಿದ್ದೇವೆ. ಇಂಥ ಪದ್ಧತಿಗಳು ಎಲ್ಲಿ ನಡೆಯುತ್ತಿವೆ ಎಂಬುದನ್ನು ತಿಳಿದುಕೊಂಡು ಆ ವಿಚಾರವನ್ನು ಸರ್ಕಾರಕ್ಕೆ ತಿಳಿಸುವ ಸಲುವಾಗಿ ಒಂದು ಸಮಿತಿಯನ್ನು ಮಾಡಿ ಆದರಲ್ಲಿ ಗೃಹ ಇಲಾಖೆ ಕಾರ್ಯದರ್ಶಿ ಅಥವಾ ಸಮಾಜ ಕಲ್ಯಾಣ ಇಲಾಖಾ ಕಾರ್ಯದರ್ಶಿ ನೇತೃತ್ವದಲ್ಲಿ ನಾಲ್ಕು ಜನ ಜಂಟಿ ನಿರ್ದೇಶಕರುಗಳನ್ನು ಕೂಡ ಸಮಿತಿಯಲ್ಲಿ ಸೇರಿಸಿ ಒಂದು ವರ್ಷಾಧ ಒಳಗಡೆ ಅನಿಷ್ಟ ಪದ್ಧತಿಗಳು ಎಲ್ಲೆಲ್ಲಿ ನಡೆಯುತ್ತಿವೆ ಎಂಬ ಬಗ್ಗೆ ವಿಷಯವನ್ನು ಸಂಗ್ರಹ ಮಾಡಲು ತಿಳಿಸಬೇಕು. ತದನಂತರ ಇದರ ನಿರ್ಮೂಲನೆಗೆ ಕಾನೂನನ್ನು ಮಾಡುವ ಮೂಲಕ ಸಾಧ್ಯತೆಗಳಿವೆಯೇ ಅಥವಾ ಬೇರೆ ರೀತಿಯ ನಿಯಮಾವಳಿಗಳನ್ನು ಮಾಡುವುದರಿಂದ ನಿರ್ಮೂಲನೆ ಮಾಡಲು ಸಾಧ್ಯವಾಗುತ್ತದೆಯೋ ಎಂಬ ಬಗ್ಗೆ ಪರಿಶೀಲನೆ ಮಾಡಬೇಕೆಂದು ಹೇಳಿ ಇಂದು ತಂದಿರುವ ಮಸೂದೆಯನ್ನು ಸ್ವಾಗತ ಮಾಡಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಆರಗ ಜ್ಞಾನೇಂದ್ರ (ತೀರ್ಥಹಳ್ಳಿ) : ಮಾನ್ಯ ಅಧ್ಯಕ್ಷರೆ, ಮಾನ್ಯ ಸಚಿವರು ಹಲವಾರು ಕಡೆ ಪ್ರವಾಸ ಮಾಡಿ ಇಂದು ಒಳ್ಳೆಯ ಶಾಸನವನ್ನು ಜಾರಿಗೆ ತಂದಿದ್ದಾರೆ. ಎಲ್ಲಿಯವರೆಗೂ ಜನರಲ್ಲಿ ದರಿದ್ರತನ ಹಾಗೂ ಅವಿದ್ಯಾವಂತಿಕೆ ಇರುತ್ತದೋ ಅಲ್ಲಿಯವರೆಗೆ ಇಂಥ ಮೂಢನಂಬಿಕೆಗಳು ಇರುತ್ತವೆ. ಇಂಥದ್ದನ್ನು ಪೋಷಣೆ ಮಾಡಿಕೊಂಡು ಸಮಾಜ ಕೂಡ ಹಾಗೆಯೇ ಬಂದುಬಿಟ್ಟಿದೆ. ಆದರೆ ಇತ್ತೀಚೆಗೆ ಆ ವರ್ಗದ ಜನರು ಶೈಕ್ಷಣಿಕವಾಗಿ ಹಾಗೂ ಆರ್ಥಿಕವಾಗಿ ಸಬಲರಾಗಿ ಬರುತ್ತಿರುವುದರಿಂದ ಮೂಢ ನಂಬಿಕೆಗಳು ತನ್ನಷ್ಟಕ್ಕೆ ತಾನೇ ಹೋಗುತ್ತಿದೆ. ಕೆಲವು ಕಡೆ ಪಳೆಯುಳಿಕೆಯಂತಿದ್ದ ಅಜಲು ಪದ್ಧತಿಯನ್ನು ನಿರ್ಮೂಲನೆ ಮಾಡುವ ಸಲುವಾಗಿ ಮಾನ್ಯ ಸಚಿವರು ಇಂದು ಶಾಸನವನ್ನು ಜಾರಿಗೆ ತಂದಿರುವುದು ಸಂತೋಷ. ಆದರೆ ಕೇವಲ ಕಾನೂನನ್ನು ಮಾಡಿಟ್ಟರೆ ಖಂಡಿತ ನಿರ್ಮೂಲನೆಯಾಗುವುದಿಲ್ಲ. ಈಗಾಗಲೇ ಹಲವಾರು ಅನಿಷ್ಟ ಪದ್ಧತಿಯನ್ನು ಹೋಗಲಾಡಿಸಲು ಕಾನೂನನ್ನು ಮಾಡಿದ್ದರೂ ಕೂಡ ಇನ್ನೂ ಅವು ಸಂಪೂರ್ಣವಾಗಿ ಹೋಗಿಲ್ಲ. ಆದಕಾರಣ ಇದರ ಬಗ್ಗೆ ಜನಜಾಗೃತಿಯನ್ನುಂಟುಮಾಡುವ ಕೆಲಸ ಮಾಡಿ ದಕ್ಷಿಣ ಕನ್ನಡ ಜಿಲ್ಲೆಯಲ್ಲಲ್ಲದೇ ಮಲೆನಾಡು ಪ್ರದೇಶದಲ್ಲಿ ಇರುವ ಕೊರಗ ಜನಾಂಗದವರು ಈ ಅನಿಷ್ಟ ಪದ್ಧತಿಯನ್ನು ಅನುಸರಿಸದಿರುವಂತೆ ಮಾಡಬೇಕಾಗಿದೆ. ಈ ಜನಾಂಗದವರಿಗೆ ನಾವೇ ಮನೆಯನ್ನು ಕಟ್ಟಿಸಿಕೊಟ್ಟು ವಾಸ ಮಾಡಿ ಎಂದರೂ ಅವರು ಮರದ ಕೆಳಗಡೆ ವಾಸ ಮಾಡುತ್ತಾರೆಯೇ ಹೊರತು ಮನೆಯಲ್ಲಿ ವಾಸ ಮಾಡುವುದಿಲ್ಲ. ನಾನೇ ನಮ್ಮ ಊರಿನಲ್ಲಿ ಸ್ವತಃ ಆಸಕ್ತಿ ವಹಿಸಿ ಊರಿನ ಜನಗಳಿಂದ 15 ಮನೆಗಳನ್ನು ಕಟ್ಟಿಸಿ ಅಲ್ಲಿ ಕೊರಗರಿಗೆ ವಾಸ ಮಾಡಿಕೊಂಡಿರಿ ಎಂದು ಹೇಳಿದೆ. ಆದರೆ ಆ ಜಾಗ ಯಾರೋ ಒಬ್ಬರಿಗೆ ಬೇಕಾಗಿತ್ತು, ಆದ್ದರಿಂದ ಆತ ಆ ಜನರಿಗೆ ನೀವು ಇಲ್ಲಿ ವಾಸ ಮಾಡಿದ್ದೇ ಆದರೆ ನಿಮ್ಮ ಪರಂಪರೆಯೇ ಉದ್ಧಾರವಾಗುವುದಿಲ್ಲ ಮತ್ತು ಒಂದು ವೇಳೆ ವಾಸ ಮಾಡಿದರೆ ನಿಮಗೆ ಕೆಡಕುಂಟಾಗುತ್ತದೆಯಾದ್ದರಿಂದ ನೀವು ಇಲ್ಲಿ ವಾಸ ಮಾಡಬಾರದು ಎಂದು ಹೇಳಿದ್ದರಿಂದ ಆ ಕೊರಗ ಜನರು ಅಲ್ಲಿ ವಾಸ ಮಾಡಲು ಹೋಗಲೇ ಇಲ್ಲ. ಕೊನೆಗೆ ಕಟ್ಟಿಸಿದ್ದ ಮನೆಯ ಕಿಟಿಕಿ, ಬಾಗಿಲು, ಹೆಂಚುಗಳನ್ನು ಊರಿನವರು ತಗೆದೆಕುಂಡು ಹೋದರು. ಇಂಥ ಒಂದು ಮೂಢನಂಬಿಕೆಯ ಬಗ್ಗೆ ನಂಬಿಕೆ ಇಟ್ಟಿರುವ ಆ ಜನಾಂಗದ ಬಗ್ಗೆ ತಂದಿರತಕ್ಕಂಥ ಕನಿಕರ ರೂಪದ ಮಸೂದೆಗೆ ನಮ್ಮೆಲ್ಲರ

ಸಹಮತಿ ಇದೆ. ಆದರೆ ಈ ಒಂದು ಕುಟುಂಬದಲ್ಲಿ ಹುಟ್ಟಿರತಕ್ಕಂಥ ಮಕ್ಕಳಿಗೆ ತಮ್ಮ ಇಲಾಖೆಯಿಂದ ಸಿಬ್ಬಂದಿವರ್ಗದವರನ್ನು ತೊಡಗಿಸಿ, ಹಿಂದುಳಿದ ಜನಾಂಗದವರಿಗೆ ಇರತಕ್ಕಂಥ ನಮ್ಮ ಹಾಸ್ಟೆಲ್‌ಗಳು ಏನಿವೆ, ಆ ಹಾಸ್ಟೆಲ್‌ಗಳಲ್ಲಿ ಕಡ್ಡಾಯವಾಗಿರತಕ್ಕಂಥ ಶಿಕ್ಷಣವನ್ನು ಕೊಟ್ಟು ಶೈಕ್ಷಣಿಕವಾಗಿ ಅವರನ್ನು ಮೇಲೆ ತರತಕ್ಕಂಥ ಕೆಲಸವನ್ನು ಮಾಡಿ ಅವರಿಗೆ ಆಕ್ರಮ ಸಕ್ರಮದಲ್ಲಿ ಸರ್ವೇ ಕಾರ್ಯ ಮಾಡಿ ಅಲ್ಲಿರತಕ್ಕಂಥ ನೌಕರ ಪಟ್ಟಾಭದ್ರ ಹಿತಾಸಕ್ತಿಗಳು ಮನೆ ನಿವೇಶನ ಕೊಡದೇ ಹೋಗಬಹುದು. ಆದುದರಿಂದ ತಮ್ಮ ಇಲಾಖೆಯಿಂದ ಇದಕ್ಕೆ ಏನಾದರೂ ಒಂದು ವಿಶೇಷವಾಗಿರತಕ್ಕಂಥ ಯೋಜನೆಯನ್ನು ಜಾರಿಗೆ ತಂದು ತಮ್ಮ ಸಿಬ್ಬಂದಿ ವರ್ಗದವರಲ್ಲಿ ಆ ಜನಾಂಗದ ಬಗ್ಗೆ ಯಾರಿಗೆ ಕಳಕಳಿ ಇದೆ ಅಂತಹವರನ್ನು ನೇಮಕ ಮಾಡಿ ಅವರಿಗೆ ಕುಂದುಕೊರತೆಗಳನ್ನು ಏನಿವೆ ಎನ್ನುವುದನ್ನು ಸಹ ಯೋಜನೆ ಮಾಡಿ ಅವರನ್ನು ಮೇಲೆತ್ತಲು ಪ್ರಯತ್ನ ಮಾಡಿದರೆ ತಮ್ಮ ಪ್ರೊಗ್ರೆಸ್ಸಿವ್ ಥಿಂಕಿಂಗ್ ಏನಿದೆ, ಇದರ ಮೂಲಕ ಹರಿದು ಬಂದಿರತಕ್ಕಂಥ ಈ ಶಾಸನ ಏನಿದೆ ಅದಕ್ಕೆ ದೊಡ್ಡ ಮೌಲ್ಯ ಬಂದಹಾಗೆ ಆಗುತ್ತದೆ. ಈ ಒಂದು ವಿಧೇಯಕಕ್ಕೆ ಖಂಡಿತವಾಗಿ ನಮ್ಮೆಲ್ಲರ ಒಂದು ಬೆಂಬಲ ಇದೆ ಎಂದು ಹೇಳುತ್ತಾ ಮಾನ್ಯ ಸಚಿವರಿಗೆ ಅಭಿನಂಧಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಎನ್. ಯೋಗೀಶ್ ಭಟ್ (ಮಂಗಳೂರು) : ಮಾನ್ಯ ಅಧ್ಯಕ್ಷರೆ, ಕಳೆದ ಒಂದು ವರ್ಷದ ಹಿಂದೆ ಸುಮಾರು ಎಂಟತ್ತು ತಿಂಗಳ ಹಿಂದೆ, ವಿಧಾನಸಭೆ ಅಧಿವೇಶನದ ಸಂದರ್ಭದಲ್ಲಿ ನಾನೇ ಇದರ ಬಗ್ಗೆ ಪ್ರಸ್ತಾವನೆ ಮಾಡಿದ್ದೆ, ಹಾಗೂ ಸಚಿವರಲ್ಲಿ ಶೀಘ್ರದಲ್ಲೇ ಆ ಶಾಸನವನ್ನು ಜಾರಿಗೆ ತರಬೇಕೆಂದು ಒತ್ತಾಯ ಮಾಡಿ ಹೇಳಿದ್ದೆ. ಆದರೆ ಕನಿಷ್ಟ ಒಂದು ವರ್ಷದ ಮೇಲಾದರೂ ಈ ಶಾಸನವನ್ನು ಜಾರಿಗೊಳಿಸಿರುವುದಕ್ಕಾಗಿ ನಾನು ಸ್ವಾಗತ ಮಾಡುತ್ತೇನೆ. ಈ ಅಜಲು ನಿಷೇಧವನ್ನು ನಮ್ಮ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ವಿಶೇಷವಾಗಿ ಅನೇಕ ನಮ್ಮ ಕೊರಗ ಬಂಧುಗಳು ಈ ಸಮಸ್ಯೆಗಳನ್ನು ಎದುರಿಸುತ್ತಿದ್ದಾರೆ. ಈ ಸಮಸ್ಯೆಗಳಿಂದ ಕಾನೂನು ಮೂಲಕ ಒಂದು ಹಿಡಿತವನ್ನು ತರುವಂತಹ ಒಂದು ಕಾರ್ಯವನ್ನು ನಾವು ತೆಗೆದುಕೊಳ್ಳುತ್ತಿದ್ದೇವೆ. ಆದರೆ ಸಾಮಾಜಿಕ ನೆಲೆಯಲ್ಲಿ ಕೂಡ ಅದನ್ನು ಕಾರ್ಯರೂಪದಲ್ಲಿ ತರುವಂತಹ, ಒಂದು ಅವೇರ್‌ನೆಸ್ ಕ್ರಿಯೇಟ್ ಮಾಡುವಂತಹ ಒಂದು ವಿಶೇಷವಾದಂತಹ ಪ್ರಯತ್ನ ಕೂಡ ಅದರ ಜೊತೆಯಲ್ಲಿ ಆಗಬೇಕಾಗಿದೆ. ಈ ಸಂದರ್ಭದಲ್ಲಿ ಇನ್ನೊಂದು ವಿಚಾರವನ್ನು ಕೂಡ ತಮ್ಮ ಗಮನಕ್ಕೆ ತರುವುದಕ್ಕೆ ಇಷ್ಟಪಡುತ್ತೇನೆ. ಏನೆಂದರೆ ಇತ್ತೀಚೆಗೆ ಕೆಲವು ತಿಂಗಳ ಹಿಂದೆ ಸುಮಾರು 25ಕ್ಕಿಂತ ಹೆಚ್ಚಿನ ಕೊರಗ ಬಂಧುಗಳನ್ನು ಅರೆಸ್ಟ್ ಮಾಡಿ ಅವರನ್ನು ಜೈಲಿಗೆ ಹಾಕಿದರು. ಏಕೆಂದರೆ ಸ್ಥಳವು ಸಿಕ್ಕದೆ ಇರುವ ಕಾರಣಕ್ಕೆ ಅರಣ್ಯ ಪ್ರದೇಶದಲ್ಲಿ ವಿಶೇಷವಾಗಿ ಎಸ್‌ಸಿ/ಎಸ್‌ಟಿ ಜನಾಂಗಕ್ಕೆ ಸೇರಿದವರಾಗಿದ್ದರಿಂದ, ಅರಣ್ಯ ಪ್ರದೇಶದಲ್ಲಿ ಇರುವಂತಹ ಕೆಲವು ಜಾಗದಲ್ಲಿ ಕೃಷಿ ಕಾರ್ಯವನ್ನು ತೆಗೆದುಕೊಂಡಿದ್ದರು. ಅದಕ್ಕೋಸ್ಕರ ಕಾನೂನು ಕ್ರಮ ತೆಗೆದುಕೊಂಡು ಅವರನ್ನು ಅರೆಸ್ಟ್ ಮಾಡುವಂತಹ ಒಂದು ಹೆಜ್ಜೆಯನ್ನು ಸರ್ಕಾರ ತೆಗೆದುಕೊಂಡಿತ್ತು. ಅದಕ್ಕೋಸ್ಕರ ನಾನು, ಡಾ. ಮಹಮ್ಮದ್ ಪೀರ್ ವರದಿ ಏನಿದೆ ಅದರಲ್ಲಿ ಇರುವಂತಹ ಒಳ್ಳೆಯ ಅಂಶಗಳನ್ನು ಸರ್ಕಾರ, ಗಂಭೀರವಾಗಿ ತೆಗೆದುಕೊಂಡು ಅವರಿಗೆ ಸ್ಥಳವನ್ನು ಕೊಡುವ ಮೂಲಕ ಸ್ವಾವಲಂಬನೆಯಾಗಿ ಜೀವನ ನಡೆಸುವ ನಿಟ್ಟಿನಲ್ಲಿ ವಿಶೇಷ ಕಾರ್ಯಕ್ರಮಗಳನ್ನು ತೆಗೆದುಕೊಳ್ಳಬೇಕು ಎಂದು ಒತ್ತಾಯವನ್ನು ಮಾಡುತ್ತಿದ್ದೇನೆ. ಅದೇ ರೀತಿ ನಾನು

ಪದೇಪದೇ ಅಧಿವೇಶನದಲ್ಲಿ ಅಥವಾ ಕಳೆದ ಟರ್ಮ್‌ನಲ್ಲಿ ಕೂಡ ಒತ್ತಾಯ ಮಾಡುತ್ತಿದ್ದೇನೆ. ಹಾಸ್ಟೆಲ್ ಫೆಸಿಲಿಟೀಸ್‌ಗೆ ಸಂಬಂಧಪಟ್ಟ ಹಾಗೆ 18 ಪರ್ಸೆಂಟ್ ಹಣದಲ್ಲಿ ವಿಶೇಷವಾಗಿ ಎಸ್‌ಸಿ/ಎಸ್‌ಟಿಯವರಿಗೆ ನಗರ ಮತ್ತು ಕೇಂದ್ರ ಪ್ರದೇಶದಲ್ಲಿ ಇರಬೇಕು ಎನ್ನುವ ಕಾರಣಕ್ಕೆ ಒತ್ತಾಯ ಮಾಡಿದರೂ ಕೂಡ 32 ಲಕ್ಷ ರೂಪಾಯಿ ವಂಚನೆ ಮಾಡಿಕೊಂಡು ಇವತ್ತಿಗೂ ಆ ವಿಚಾರದಲ್ಲಿ ತೀರ್ಪು ಆಗಿಲ್ಲ. ಮಾನ್ಯ ಸಚಿವರು ನನ್ನ ಕ್ಷೇತ್ರಕ್ಕೆ ಬಂದಾಗ ಅವರ ಗಮನಕ್ಕೂ ಕೂಡ ತಂದಿದ್ದೆ. ಇನ್ನು ಹೊಸ ಕಟ್ಟಡ ಕಟ್ಟುವುದಕ್ಕೆ ಆಗಿಲ್ಲ. ಯಾರೂ ಕಾನೂನು ಭಂಗ ಮಾಡಿದ್ದಾರೆ ಅವರು ಇವತ್ತು ರಾಜಾರೋಷವಾಗಿ ತಿರುಗಾಡುತ್ತಿದ್ದಾರೆ. ಇಂತಹ ಒಂದು ದ್ರೋಹ ಕೂಡ ಇನ್ನೊಂದು ಕಡೆ ನಡೆಯುತ್ತದೆ. ಅದರ ಬಗ್ಗೆ ಕಾನೂನು ಕ್ರಮ ತೆಗೆದುಕೊಂಡು, ಹಾಸ್ಟೆಲ್ ಫೆಸಿಲಿಟೀಸ್ ತಕ್ಷಣ ಕೊಡುವ ವ್ಯವಸ್ಥೆ ಮಾಡಬೇಕು. ಏಕೆಂದರೆ ಶಿಕ್ಷಣದ ಮೂಲಕ ಮಾತ್ರ ಪರಿವರ್ತನೆ ತರುವುದಕ್ಕೆ ಅವರಲ್ಲಿ ಸಾಧ್ಯವಾಗುತ್ತದೆ. ಆದುದರಿಂದ ಹಾಸ್ಟೆಲ್‌ಗಳ ಬಗ್ಗೆ ಕೂಡ ಹೆಚ್ಚಿನ ಆದ್ಯತೆಯನ್ನು ಕೊಡಬೇಕೆಂದು ಒತ್ತಾಯ ಮಾಡುತ್ತೇನೆ. ಈ ಸಂದರ್ಭದಲ್ಲಿ ನಾನು ಒತ್ತಾಯ ಮಾಡುವುದೇನೆಂದರೆ ಡಾ. ಮಹಮ್ಮದ್ ಪೀರ್ ಅವರ ವರದಿಯಲ್ಲಿ ಇರುವಂತಹ ಒಳ್ಳೆಯ ಅಂಶಗಳನ್ನು ಅನುಷ್ಠಾನಕ್ಕೆ ತರುತ್ತೇವೆನ್ನುವ ಆಶ್ವಾಸನೆಯನ್ನು ತಾವು ಕೊಡಬೇಕು. ಈ ಅಜಲು ಪದ್ಧತಿ ನಿಷೇಧ ಮಸೂದೆಯನ್ನು ಇವತ್ತಾದರೂ ತಂದಿದ್ದಕ್ಕೆ ಮಾನ್ಯ ಸಚಿವರನ್ನು ಅಭಿನಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಎಸ್. ಅಂಗಾರ (ಸೂಳ್ಯ) : ಮಾನ್ಯ ಅಧ್ಯಕ್ಷರೇ, ಈ ಒಂದು ಕೊರಗ ಜನಾಂಗದಲ್ಲಿ ಅಜಲು ಪದ್ಧತಿ ಒಂದು ಮೂಢ ನಂಬಿಕೆ ಕಾರ್ಯಕ್ರಮ ಇದ್ದು, ಆ ಕಾರ್ಯಕ್ರಮ ಈ ದೇಶಕ್ಕೆ ಸ್ವಾತಂತ್ರ್ಯ ಬಂದು 50 ವರ್ಷಗಳ ನಂತರ ಪ್ರಥಮ ಭಾರಿಗೆ, ಈ ಜನಾಂಗದವರು ಏನು ಶೋಷಣೆಗೆ ಒಳಗಾಗಿದ್ದಾರೆ ಅವರನ್ನು ಮುಕ್ತಗೊಳಿಸಿ ಅವರನ್ನು ಒಳ್ಳೆಯ ದಾರಿಗೆ ತರುವಂತಹ ಒಂದು ಮಸೂದೆಯನ್ನು ಮಾನ್ಯ ಸಮಾಜ ಕಲ್ಯಾಣ ಸಚಿವರು ಮಾಡಿದ್ದಾರೆ. ನಾನು ಅವರಿಗೆ ತುಂಬು ಹೃದಯದ ಕೃತಜ್ಞತೆಯನ್ನು ಸಲ್ಲಿಸುತ್ತೇನೆ. ಮಾನ್ಯ ಅರಗ ಜ್ಞಾನೇಂದ್ರ ಅವರು, ಆ ಜನಾಂಗದವರಿಗೆ ಸ್ಥಳವನ್ನು ಕೊಟ್ಟು ಬೇರೆ ಬೇರೆ ರೀತಿಯ ಸೌಲಭ್ಯವನ್ನು ಕೊಟ್ಟರೂ ಕೂಡ ಅವರು ಅದನ್ನು ಪಡೆದುಕೊಂಡು ಮುಂದೆ ಬರುವುದಕ್ಕೆ ತುಂಬು ಪ್ರಯತ್ನವನ್ನು ಮಾಡುವುದಿಲ್ಲವೆಂದು ಹೇಳಿದರು. ಅದಕ್ಕಾಗಿ ನನ್ನ ವಿನಂತಿ

5.10 ಪಿ.ಎಂ

ಸರ್ಕಾರದ ಕಡೆಯಿಂದ ಅನೇಕ ರೀತಿಯ ಯೋಜನೆಗಳು, ಈ ಕೊರಗ ಜನಾಂಗಕ್ಕೆ ಸಂಬಂಧಪಟ್ಟ ಹಾಗೆ ಇದೆ. ಈ ಯೋಜನೆಯನ್ನು ಕಟ್ಟುನಿಟ್ಟಾಗಿ ಆ ಜನಾಂಗದವರಿಗೆ ಒದಗಿಸಿ ಅದನ್ನು ಕಾರ್ಯಗತ ಮಾಡಿ ಅವರಿಗೆ ಆರ್ಥಿಕವಾಗಿ ಅಥವಾ ಶೈಕ್ಷಣಿಕವಾಗಿ ಮುಂದೆ ಬರುವಲ್ಲಿ ಹೆಚ್ಚು ಒತ್ತನ್ನು ಕೊಡಬೇಕೆಂದು ಈ ಸಂದರ್ಭದಲ್ಲಿ ಮಾಡುತ್ತಾ, ಈ ಜನಾಂಗ ಶೋಷಣೆಗೆ ಒಳಗಾಗಿ ಸ್ವಾಭಿಮಾನದಿಂದ ಅವರಿಗೆ ಬದುಕುವಂತಹ ವ್ಯವಸ್ಥೆಯ ಈ ಮಸೂದೆಯನ್ನು ತಂದಿರುವುದಕ್ಕೆ ಕೃತಜ್ಞತೆಯನ್ನು ಸಲ್ಲಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಕೆ. ಜಯಪ್ರಕಾಶ್ ಹೆಗಡೆ (ಬ್ರಹ್ಮಾವರ) : ಮಾನ್ಯ ಅಧ್ಯಕ್ಷರೆ, ಮಾನ್ಯ ಸಚಿವರನ್ನು ಈ ಒಂದು ವಿಧೇಯಕವನ್ನು ತಂದಿರುವುದಕ್ಕೆ ಅಭಿನಂದನೆಯನ್ನು ಸಲ್ಲಿಸುತ್ತಾ ಈ ವಿಧೇಯಕವನ್ನು ಇಲ್ಲಿ ಮಂಡಿಸಿ ಅದು ಪಾಸಾದ ಕೂಡಲೇ ನಮ್ಮ ಕೆಲಸ ಮುಗಿಯಿತು ಎಂದು ಅಲ್ಲ. ಇನ್ನು ಇದು ಪ್ರಾರಂಭ. ಈ ವಿಧೇಯಕವನ್ನು ತಂದರೂ ಸಹ ಆ ಕೊರಗರ ಮನಸ್ಸಿನಲ್ಲಿ ಮೂಢ ನಂಬಿಕೆ ಎಷ್ಟು ನಾಟಿ ಹೋಗಿದೆ ಎಂದರೆ ನಾನೇ ಸ್ವತಃ ನನ್ನ ಅನುಭವವನ್ನು ಹೇಳುತ್ತೇನೆ. ನಮ್ಮ ಮನೆಯ ಒಂದು ಕಾರ್ಯಕ್ರಮದಲ್ಲಿ ಅವರನ್ನು ಪ್ರಯತ್ನ ಪಟ್ಟು ನಮ್ಮ ಮನೆಯ ಮೇಜು ಕುರ್ಚಿಯ ಮೇಲೆ ಕೂರಿಸಿ ಊಟ ಹಾಕುವುದಕ್ಕೆ ನೋಡಿದೆ. ಆದರೆ ಅವರು ಒಳಗೇ ಬರಲಿಲ್ಲ. ಅವರು ನಮಗೆ ಹೊರಗೆ ಊಟ ಹಾಕಿ ಎಂದು ಹೇಳಿದರು. ಕೊನೆಯಲ್ಲಿ ಅವರು ನಮಗೆ ಒಂದು ಪಾತ್ರೆಯಲ್ಲಿ ಅಡಿಗೆಯನ್ನು ಹಾಕಿಕೊಡಿ ನಾವು ತೆಗೆದುಕೊಂಡು ಹೋಗುತ್ತೇವೆಂದು ಹೇಳಿದರು. ಆದುದರಿಂದ ಅವರನ್ನು ಎಜುಕೇಟ್ ಮಾಡುವಂತಾದ್ದು ಬಹಳ ಮುಖ್ಯ. ಅವರನ್ನು ಎಜುಕೇಟ್ ಮಾಡದೇ ಇದ್ದರೆ ಯಾವ ಕಾನೂನು ತಂದರೂ ಕೂಡ ಕೆಲವರು ಇದರ ದುರುಪಯೋಗವನ್ನು ಮಾಡಿಕೊಳ್ಳುವುದಕ್ಕೆ ಅವಕಾಶವಾಗುತ್ತದೆ. ಆದುದರಿಂದ ತಮ್ಮ ಇಲಾಖೆ ಹಾಗೂ ಜನಪ್ರತಿನಿಧಿಗಳಾದ ನಾವು ಅವರನ್ನು ಎಜುಕೇಟ್ ಮಾಡುವುದಕ್ಕೆ ಬಹಳಷ್ಟು ಪ್ರಯತ್ನ ಮಾಡಬೇಕು. ಮತ್ತು ಮಾನ್ಯ ಯೋಗೀಶ್‌ಭಟ್‌ರವರು ಅವರನ್ನು ಅರಣ್ಯ ಪ್ರದೇಶದಲ್ಲಿ ಅರೆಸ್ಟ್ ಮಾಡಿದರು ಎಂದು ಹೇಳಿದರು. ಅದು ನನ್ನ ಕ್ಷೇತ್ರದಲ್ಲಿ ನಡೆದ ಘಟನೆ. ಈಗಾಗಲೇ ತಾವು ಒಂದು ಕಾರ್ಯಕ್ರಮ ಹಾಕಿಕೊಂಡು ಅವರಿಗೆ ಸ್ಥಳವನ್ನು ಗುರುತಿಸಿ ಅನೇಕ ಕಡೆಗಳಲ್ಲಿ ಸ್ಥಳ ಕೊಡುವಂತಹ ವ್ಯವಸ್ಥೆಯನ್ನು ಮಾಡುತ್ತಿದ್ದೀರಿ. ಅದಕ್ಕೆ ನನ್ನ ಅಭಿನಂದನೆಗಳು. ಅವರು ಭೂ ಒಡೆತನವನ್ನು ಹೊಂದಬೇಕು ಎನ್ನುವಂತಹ ಅವರ ಮನಸ್ಸಿನಲ್ಲಿ ಇರುವುದನ್ನು ಪೂರೈಸಿಕೊಟ್ಟು ಅವರು ಸ್ವತಃ ಭೂ ಒಡೆತನವನ್ನು ಹೊಂದಿ ಸಾಗುವಳಿಯನ್ನು ಮಾಡುವುದಕ್ಕೆ ಪ್ರಯತ್ನ ಮಾಡಿದಾಗ ಬಹುಶಃ ಮುಖ್ಯವಾಹಿನಿಯಲ್ಲಿ ಅವರು ಬರುವುದಕ್ಕೆ ಪ್ರಯತ್ನ ಮಾಡುತ್ತಾರೆ. ಈ ಒಂದು ಪ್ರಯತ್ನದಲ್ಲಿ ನಾವೆಲ್ಲರೂ ಸಹ ತಮಗೆ ಸಹಕಾರವನ್ನು ಕೊಡುತ್ತೇವೆ ಎಂದು ಹೇಳಿ ನಾನು ಪುನಃ ತಮಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

+ಶ್ರೀ ವೈ.ಕೆ. ರಾಮಯ್ಯ (ಹುಲಿಯೂರುದುರ್ಗ) : ಮಾನ್ಯ ಅಧ್ಯಕ್ಷರೆ, ಸಾಮಾಜಿಕ ಪಿಡುಗನ್ನು ತೊಡೆದು ಹಾಕುವುದರಲ್ಲಿ ಒಂದು ದಿಟ್ಟ ಹೆಜ್ಜೆಯನ್ನು ಇಟ್ಟಿರುವಂತಹ ಮಸೂದೆ ತಂದಿರುವುದಕ್ಕೆ ನಾನು ಅಭಿನಂದಿಸುತ್ತೇನೆ. ಈ ಸಾಮಾಜಿಕ ಪಿಡುಗನ್ನು ತೊಡೆದು ಹಾಕುವಂತಹ ಒಂದು ಪ್ರಯತ್ನ, ಮಾನ್ಯ ರಾಮ್ ಮನೋಹರ್ ಲೋಹಿಯ ಅವರು ವಿಧವಾ ವಿವಾಹ ನಿಷೇದ ಮಾಡಿದ ಕಾಲದಿಂದ ಎಲ್ಲಾ ಸಮಾಜದ ಕಾಲದಿಂದಲೂ ನಡೆದುಕೊಂಡು ಬಂದಿದೆ. ಇದನ್ನೆಲ್ಲಾ ಗಮನಿಸಿದಂತಹ ಸಾಮಾಜಿಕ ತಜ್ಞರಾದಂತಹ 'ಮೆಕೊ' ಅವರು ಒಂದು ಮಾತು ಹೇಳಿದರು. "Social evils cannot be eradicated. They can only be controlled by enacting laws". ಅದನ್ನು ನನ್ನ ಸ್ನೇಹಿತರು ಯಾರೋ ಹೇಳಿದರು. ಬರೀ ಕಾನೂನನ್ನು ಮಾಡುವುದರಿಂದ ಈ ಪಿಡುಗನ್ನು ತೊಡೆದು ಹಾಕುವುದಕ್ಕೆ ಸಾಧ್ಯವಾಗುವುದಿಲ್ಲ. ಬಹುಶಃ ಕಾನೂನನ್ನು ಪಾಸ್ ಮಾಡಿ ಮತ್ತೆ ಯಾವುದರ ಮುಖಾಂತರ ಈಗಾಗಲೇ ಅನೇಕ ಸಾಮಾಜಿಕ ಪಿಡುಗನ್ನು ರದ್ದು ಮಾಡುವುದು, ಪ್ರಾಹಿಬಿಟ್ ಮಾಡುವುದು ಈ ಸಮಾಜದಲ್ಲಿ

ಮಾಡಿಯಾಗಿದೆ. ಆದರೂ ಕೂಡ ನಮ್ಮ ಮಧ್ಯದಲ್ಲಿ ಅನೇಕ ಪಿಡುಗುಗಳು ಕಾರ್ಯಾಚರಣೆಯಲ್ಲಿ ಇವೆ. ಇದಕ್ಕೆ ಮೂಲ ಕಾರಣ ನನ್ನ ಪ್ರಕಾರ ಹೇಳುವುದಾದರೆ ಮೂಢ ನಂಬಿಕೆ. ಎರಡನೆಯದಾಗಿ ಕೆಲವು ವರ್ಗದ ಜನ ಬೇರೆ ವರ್ಗದವರನ್ನು ಇದೇ ರೀತಿ ಇಟ್ಟುಕೊಂಡು ಅವರನ್ನು ಶೋಷಿಸುವುದಕ್ಕೆ ಸಾಧ್ಯವಾಗುತ್ತದೆಂದು ಪಟ್ಟಾಭದ್ರಾಹಿತಾಸಕ್ತಿಗಳು ಮುಖ್ಯ ಕಾರಣ ಎಂದು ನಾನು ಭಾವಿಸಿಕೊಂಡಿದ್ದೇನೆ. ಆದುದರಿಂದ ನನ್ನ ಸ್ನೇಹಿತರು ಏನು ಅಭಿಪ್ರಾಯ ವ್ಯಕ್ತಮಾಡಿ ಕಾನೂನನ್ನು ತರುವುದರ ಜೊತೆಗೆ ಅವರ ಬದುಕಿನಲ್ಲಿ ಬದಲಾವಣೆಯನ್ನು ತರುವುದರ ಮುಖಾಂತರ ಅವರಿಗೆ ವಿದ್ಯಾಭ್ಯಾಸವನ್ನು ಕೊಡುವುದರ ಮುಖಾಂತರ ಅವರಿಗೆ ವಿಚಾರ ಕ್ರಾಂತಿಯನ್ನು ಅವರ ಬದುಕಿನಲ್ಲಿ ತರುವುದರ ಮುಖಾಂತರ ಸಾಮಾಜಿಕ ಪಿಡುಗನ್ನು ತೊಡೆದು ಹಾಕುವುದಕ್ಕೆ ಸಮಾಜ ಕಲ್ಯಾಣ ಸಚಿವರು ಕಾರ್ಯಕ್ರಮ ಹಮ್ಮಿಕೊಳ್ಳಲಿ ಎಂದು ನನ್ನ ಅಭಿಪ್ರಾಯವನ್ನು ವ್ಯಕ್ತ ಮಾಡಿ ಮಾನ್ಯ ಮಂತ್ರಿಗಳನ್ನು ಅಭಿನಂದಿಸುತ್ತೇನೆ.

ಶ್ರೀ ಸಿ. ಗುರುಸ್ವಾಮಿ (ಚಾಮರಾಜನಗರ) : ಸನ್ಮಾನ್ಯ ಅಧ್ಯಕ್ಷರೆ, ಇವತ್ತು ಸಮಾಜ ಕಲ್ಯಾಣ ಮಂತ್ರಿಗಳೇನು ಈ ಒಂದು ಮಸೂದೆಯನ್ನು ತಂದಿದ್ದಾರೆ ಇದು ಸ್ವಾಗತಾರ್ಹವಾದುದು. ಆದರೆ ನನಗೇನು ಭಯವೆಂದರೆ, ಈ ಮಸೂದೆಯನ್ನು ಓದಿ ನೋಡಿದಾಗ ಇದರಲ್ಲಿ ಮಾರ್ಪಾಡುಗಳಾಗ ಬೇಕೆನ್ನುವುದು ನನ್ನ ಭಾವನೆಯಾಗಿದೆ. ಈ ಕೊರಗ ಜನಾಂಗಕ್ಕೆ ಸೇರಿದವರು ಈ ಪದ್ಧತಿಯನ್ನು ಮಾತ್ರ ಅಳವಡಿಸಿಕೊಳ್ಳುತ್ತಿದ್ದಾರೆ, ಕೊರಗರ ಜೊತೆಗೆ ಬೇರೆ ಯಾರಾದರೂ ಕೂಡ, ಇಂತಹ ಪದ್ಧತಿಯನ್ನು ಸಮಾಜದಲ್ಲಿ ಆಚರಿಸುತ್ತಿದ್ದರೆ ಅದನ್ನು ಕೂಡ ಈ ಮಸೂದೆಯಲ್ಲಿ ಸೇರಿಸುವುದು ಸೂಕ್ತವಾಗಿರುತ್ತದೆ. ಮಾನ್ಯ ಜಯಪ್ರಕಾಶ್ ಹೆಗಡೆಯವರು ಹೇಳಿದಂತೆ ಎಷ್ಟೆ ಕಾನೂನುಗಳನ್ನು ನೀತಿ ನಿಯಮಗಳನ್ನು ನಾವು ಮಾಡಿದರೂ ಕೂಡ ಆ ಜನಾಂಗದವರೆ ವಾಲೆಂಟರಿಯಾಗಿ ಇಂತಹ ಪದ್ಧತಿಯನ್ನು ಆಚರಿಸುವಂತಹ ಉದಾಹರಣೆಗಳನ್ನು ನೋಡಿದ್ದೇವೆ. ಅವರನ್ನು ಕುರ್ಚಿಯ ಮೇಲೆ ಕುಳಿತುಕೊಳ್ಳಲು ಕರೆದರೆ ಊಟಕ್ಕೆ ಕರೆದರೆ ಬರದಿರತಕ್ಕಂತಹ ಪರಿಸ್ಥಿತಿಯನ್ನು ನೋಡಿದ್ದೇವೆ. ಆದುದರಿಂದ ಯಾರು ಈ ಒಂದು ಪದ್ಧತಿಯನ್ನು ಆಚರಿಸಲು ಪ್ರೋತ್ಸಾಹ ಕೊಟ್ಟರೆ, ಜೊತೆಗೆ ಈ ಜನಾಂಗಕ್ಕೆ ಸೇರಿದ ಜನ ವಾಲೆಂಟರಿಯಾಗಿ ಇಂತಹ ಪದ್ಧತಿಯನ್ನು ಆಚರಿಸಲು ಮುಂದಾದರೆ ಅದು ಕೂಡ ಅಪರಾಧವಾಗುತ್ತದೆ, ಶಿಕ್ಷೆಗೆ ಒಳಗಾಗುತ್ತಾರೆ ಎನ್ನುವುದನ್ನು ಈ ಒಂದು ಮಸೂದೆಯಲ್ಲಿ ಸೇರಿಸುವುದು ಸೂಕ್ತವೆಂದು ನಾನು ಭಾವಿಸುತ್ತೇನೆ. ಮಾನ್ಯ ಸಚಿವರು ಈ ಬಗ್ಗೆ ಗಮನಹರಿಸಬೇಕೆಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

+ಶ್ರೀ ಕಾಗೋಡು ತಿಮ್ಮಪ್ಪ (ಸಮಾಜ ಕಲ್ಯಾಣ ಸಚಿವರು) : ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರಾದಂತಹ ಶ್ರೀ ಪಿ.ಜಿ.ಆರ್. ಸಿಂಧ್ಯರವರು ಮಾತನಾಡುತ್ತಾ ಸಮಾಜದಲ್ಲಿರತಕ್ಕಂತಹ ಇಂತಹ ದೋಷಗಳನ್ನು ಮುಕ್ತಾಯ ಮಾಡುವ ಕೆಲಸಕ್ಕೆ ಇನ್ನಷ್ಟು ವ್ಯಾಪಕವಾದ ಚಿಂತನೆಯನ್ನು ಮಾಡಬೇಕೆಂದು ಹೇಳಿದ್ದಾರೆ, ಅದನ್ನು ನಾನು ಒಪ್ಪುತ್ತೇನೆ. ಹುಟ್ಟಿನಿಂದ ಶೂದ್ರರಾಗಿ ಹುಟ್ಟಿ ಬಿಟ್ಟಿದ್ದೇವೆ, ಈ ಮೂಢನಂಬಿಕೆ ಅನಿಷ್ಟ ಪದ್ಧತಿಗಳು ಇವರಲ್ಲಿ ಹೆಚ್ಚಾಗಿ ಕಂಡು ಬರುವುದನ್ನು ನೋಡಿದ್ದೇವೆ. ಹೋರಾಟಗಳನ್ನು ಮಾಡುತ್ತಾ ಬಂದರೂ ಕೂಡ ಈ ನಿಟ್ಟಿನಲ್ಲಿ ನಡೆದ ಹೋರಾಟಗಳು ಬಹಳ ಕಡಿಮೆ. ಆದುದರಿಂದ ನಾವು ಎರಡು ಜೀವನವನ್ನು ಅನುಭವಿಸಿದ್ದೇವೆ, ಕೆಳಗಿನ ಜೀವನವನ್ನು ಕಂಡಿದ್ದೇವೆ, ಮೇಲಿನ ಜೀವನವನ್ನು ಕಂಡಿದ್ದೇವೆ, ಮೇಲಿನ ಜೀವನವನ್ನು ಕಂಡು ಅಂದಿನ ಅನುಭವವನ್ನು ನಾವು ಮರೆಯಲಾಗುವುದಿಲ್ಲ. ಆದುದರಿಂದ

ನಾವೆಲ್ಲರೂ ಸೇರಿ ಅನಿವಾರ್ಯವಾಗಿ ಸಾಮಾಜಿಕ ಪರಿವರ್ತನೆಯನ್ನು ಮಾಡಬೇಕಾದರೆ ಹೋರಾಟವನ್ನು ಮಾಡಲೇಬೇಕು. ತಾವು ಹೇಳಿದಂತಹ ಮಾತನ್ನು ಗಮನದಲ್ಲಿಟ್ಟುಕೊಳ್ಳುತ್ತೇವೆ. ಇಂತಹ ಪದ್ಧತಿಗಳು ನಮ್ಮ ನಿಮ್ಮ ಅನೇಕ ಊರುಗಳಲ್ಲಿ ಇದೆ, ಅನೇಕ ಸಾರಿ ಕಠಿಣ ಕ್ರಮಗಳನ್ನು ಕೈಗೊಳ್ಳುವಾಗ ವಿರೋಧಕ್ಕೂ ಕೂಡ ಒಳಗಾದ ಅನೇಕ ಸಂದರ್ಭಗಳು ಕೂಡ ಉಂಟು. ನಾವು ದೊಡ್ಡ ಹೋರಾಟವನ್ನು ಕೂಡ ಮಾಡಿದ್ದೇವೆ, ಆದರೆ ಬೆತ್ತಲೆಸೇವೆಯ ಪದ್ಧತಿಯ ವಿರುದ್ಧ ಹೋರಾಟ ಮಾಡುವುದಕ್ಕೆ ಹೋಗಲಿಲ್ಲ. ನಮಗಿದ್ದಂತಹ ಗುರಿ ಈ ಭೂಒಡೆತನ ದಾಸ್ಯದಿಂದ ಹೊರಗೆ ಬರಬೇಕೆನ್ನುವುದು ಆಗಿದೆ. ಮಾನ್ಯ ಗೋಪಾಲಗೌಡರವರಂತಹವರು ಆ ನೆಲದಲ್ಲಿ ಹೋರಾಟ ಮಾಡಿದಂತವರು, ಈ ಹೋರಾಟದ ಮತ್ತು ಪರಿವರ್ತನೆಯ ಮಾತುಗಳನ್ನು ಆ ಪ್ರದೇಶದಲ್ಲಿ ಹೇಳಿದ್ದರು. ಆದರೆ ಆ ಭಾಗಕ್ಕೆ ಕೈಹಾಕಿದ್ದರೆ ನಮ್ಮ ಭೂಮಿಯ ಹೋರಾಟಕ್ಕೆ ಅಡಚಣೆ ಉಂಟಾಗಬಹುದು ಎಂಬ ಅಂಜಿಕೆಯು ಕೂಡ ನಮಗಿತ್ತು. ಆ ಲೋಪವನ್ನು ನಾನು ಕೂಡ ಅನೇಕಸಾರಿ ಒಪ್ಪಿಕೊಳ್ಳುತ್ತೇನೆ. ನಾವು ಹೋರಾಟ ಮಾಡಿದರೂ ಕೂಡ ನಮ್ಮಿಂದ ಆ ಒಂದು ಪದ್ಧತಿಯನ್ನು ನಿರ್ಮೂಲನ ಮಾಡುವುದಕ್ಕೆ ಹೋರಾಟ ನಮ್ಮ ಕಡೆಯಿಂದ ಮಾಡಲಿಲ್ಲ ಎನ್ನುವ ಆತಂಕ ಈಗಲೂ ಕೂಡ ನಮ್ಮನ್ನು ಬಾಧಿಸುತ್ತಿದೆ. ಆದರಿಂದ ತಾವು ಹೇಳಿದಂತಹ ಮಾತುಗಳನ್ನು ಗಮನದಲ್ಲಿಟ್ಟುಕೊಂಡು ನಾವೆಲ್ಲರೂ ಕೂಡ ಒಂದು ಕಡೆ ಸೇರಿ ಈ ನಿಟ್ಟಿನಲ್ಲಿ ಕೆಲಸ ಮಾಡಬೇಕಾಗಿದೆ. ಕೆಲವು ಪಾಸಿಟೀವ್ ಸ್ಟೆಪ್ಸ್ ತೆಗೆದುಕೊಳ್ಳಲು ಇದು ಸರಿಯಾದ ಕಾಲ. ನಾವೆಲ್ಲರೂ ಒಂದು ಕಡೆ ಕುಳಿತುಕೊಂಡು ಇಂತಹ ಅನಿಷ್ಟ ಪದ್ಧತಿಗಳನ್ನು ನಿರ್ಮೂಲನೆ ಮಾಡುವುದಕ್ಕೆ ಆಲೋಚನೆಯನ್ನು ಮಾಡಿ ಒಂದು ಕಾನೂನನ್ನು ತರತಕ್ಕಂತಹ ಅಗತ್ಯವಿದೆ, ನಾನು ನನ್ನೊಂದಿಗೆ ತಮ್ಮಲ್ಲಿ ಅನೇಕ ಜನರನ್ನು ಸೇರಿಸಿಕೊಂಡು ಆ ದಿಸೆಯಲ್ಲಿ ಕೆಲಸ ಮಾಡುತ್ತೇನೆ. ಮಾನ್ಯ ಸದಸ್ಯರಾದ ಅರಗ ಜ್ಞಾನೇಂದ್ರರವರು ಹೇಳಿದಂತೆ ನಮ್ಮ ಊರಿನಲ್ಲಿ ಅಂತಹ ಸಂದರ್ಭ ಬಂದಿದ್ದು ನಿಜ. ಶ್ರೀಮಾನ್ ದಿವಂಗತ ಮಾಜಿ ಹೌಸಿಂಗ್ ಮಂತ್ರಿಯಾಗಿದ್ದ ಬಸವಲಿಂಗಪ್ಪನವರು ನಮ್ಮ ಊರಿಗೆ ಬಂದಿದ್ದರು. ನಮ್ಮಲ್ಲೂ ಕೂಡ ಹರಿಜನರು ಒಂದು ಕಡೆ ಇರುವಂತೆ ಕಾಲೋನಿಗಳನ್ನು ಮಾಡಿದ್ದೆವು, ಆದರೆ ಅಲ್ಲಿಗೆ ಹರಿಜನರೆ ಬರದೆ ಹೋದರು, ಅದು ಈಗಲೂ ಖಾಲಿಯೇ ಬಿದಿದ್ದೆ. ಹೀಗಾಗಿ ಇವತ್ತು ಆ ನಿಟ್ಟಿನಲ್ಲಿ ಜಾಗೃತಿ ಮೂಡಿಸತಕ್ಕಂತಹ ಅವಶ್ಯಕತೆ ಇದೆ, ಆ ಕೆಲಸವನ್ನು ನಾವು ಮಾಡಲೇ ಬೇಕು. ಅಜಲು ಪದ್ಧತಿಯನ್ನು ನಿಷೇಧ ಮಾಡತಕ್ಕಂತಹ ಮಸೂದೆಯನ್ನು ತರಬೇಕೆಂದು ಮಾನ್ಯ ಯೋಗೀಶ್ ಭಟ್ಟರು ಹೇಳಿದ್ದಕ್ಕೆ ನಾನು ಕೃತಜ್ಞತೆಯನ್ನು ಸಲ್ಲಿಸುತ್ತೇನೆ, ಆ ಬಗ್ಗೆ ಅವತ್ತಿನ ದಿವಸ ನಾನು ಭರವಸೆಯನ್ನು ನೀಡಿದ್ದೆ, ಆ ಭರವಸೆಯ ಪ್ರಕಾರ ಕಾನೂನನ್ನು ಸುಗ್ರಿವಾಜ್ಞೆಯ ಮುಖಾಂತರ ಜಾರಿಗೆ ತರುತ್ತಿದ್ದೇವೆ, ಮಾನ್ಯ ಜಯಪ್ರಕಾಶ್ ಹೆಗಡೆಯವರು, ಕೊರಗ ಜನಾಂಗದವರು ಭೂಮಿಗಾಗಿ ಹೋರಾಟ ಮಾಡತಕ್ಕಂತಹ ಸಂದರ್ಭದಲ್ಲಿ ಅವರ ಮೇಲೆ ಮೊಕದ್ದಮೆ ಹಾಕಿರತಕ್ಕಂತಹ ಉದಾಹರಣೆಗಳು ಇವೆ ಎಂದು ಹೇಳಿದರು, ಅದು ನಿಜವಿದೆ, ಅದು ನನ್ನ ಗಮನಕ್ಕೆ ಬಂದಿದೆ ಅದನ್ನು ಮಾನ್ಯ ಗೃಹಮಂತ್ರಿಗಳ ಗಮನಕ್ಕೂ ತಂದು ಅವರ ಮೇಲೆ ಹಾಕಿರತಕ್ಕಂತಹ ಮೊಕದ್ದಮೆಗಳನ್ನು ವಾಪಸ್ಸು ತೆಗೆದುಕೊಳ್ಳಬೇಕೆಂದು ನಾವು ಈಗಾಗಲೇ ಸಂಪುಟ ಕಾಲತ್ತನ್ನು ಹಾಕಿದ್ದೇವೆ. ನಾನು ಅಲ್ಲಿಗೆ ಹೋದಾಗ ಜಿಲ್ಲಾಧಿಕಾರಿಗಳನ್ನು ಕರೆದು ಅವರ ಮೇಲೆ ಯಾವುದೇ ಕ್ರಮಗಳನ್ನು ತೆಗೆದುಕೊಳ್ಳಬಾರದೆಂದು ಹೇಳಿದ್ದೇನೆ. ಅವರಲ್ಲಿ ಇವತ್ತು ಪ್ರಜ್ಞೆ ಬಂದಿರುವುದರಿಂದ

ನಮಗೂ ಭೂಮಿ ಬೇಕು ಎಂದು ಹೇಳುವ ಬಾಯಿ ಬಂದಿದೆ. ಅದನ್ನು ನಾವು ಗೌರವಿಸಬೇಕು, ನನಗೆ ಶಾಸಕರ ಮಿತ್ರರು ಕಡ ಸಹಾಯವನ್ನು ಮಾಡಬೇಕು, ಯಾವ ಯಾವ ಗ್ರಾಮದಲ್ಲಿ ಕಂದಾಯ ಇಲಾಖೆಯ ಭೂಮಿ ಸಾಗುವಳಿ ಸಿಗುತ್ತದೆ ಅಂತಹದ್ದನ್ನು ಪಟ್ಟಿ ಮಾಡಿದರೆ ಅದನ್ನು ತರಿಸಿಕೊಂಡು ಸರ್ಕಾರದ ಮಟ್ಟದಲ್ಲಿ ಅವರಿಗೆ ಭೂಮಿಯನ್ನು ಕೊಡತಕ್ಕಂತಹ ಕೆಲಸ ಮಾಡಬೇಕಾಗುತ್ತದೆ. ನಾನು ಅವರಿಗೆ ಹಾಗೂ ಅವರ ಪ್ರತಿನಿಧಿಗಳಿಗೆ ನಾವು ನಿಮ್ಮ ಪರವಾಗಿ ಇವತ್ತಿನ ದಿವಸ ಕೆಲಸ ಮಾಡತಕ್ಕಂತಹ ಸಂದರ್ಭದಲ್ಲಿ ಹೋರಾಟ ಮಾಡತಕ್ಕಂತಹ ಅಗತ್ಯವಿಲ್ಲವೆಂದು ಹೇಳಿದ್ದೇನೆ. ನಿಮ್ಮ ಸಂಘಸಂಸ್ಥೆಗಳು ಹಾಗೂ ಕಾರ್ಯಕರ್ತರು ಸೇರಿ ನೀವು ಮಾಡತಕ್ಕಂತಹ ಒಂದೇ ಒಂದು ಕೆಲಸವೆಂದರೆ ಎಲ್ಲೆಲ್ಲಿ ಯಾವ ಯಾವ ಗ್ರಾಮಗಳಲ್ಲಿ ಸಾಗುವಳಿಗೆ ಭೂಮಿ ಸಿಗುತ್ತದೆ ಎನ್ನುವ ಬಗ್ಗೆ ಪಟ್ಟಿ ಮಾಡಿ, ಆ ಪಟ್ಟಿಯನ್ನು ಸರ್ಕಾರಕ್ಕೆ ತರಿಸಿಕೊಂಡು ಮುಂದಿನ ಕ್ರಮ ತೆಗೆದುಕೊಳ್ಳುತ್ತೇವೆಂದು ಹೇಳಿದ್ದೇವೆ. ಆದುದರಿಂದ ಆ ಭಾಗದ ಶಾಸಕರ ಮಿತ್ರರಲ್ಲಿ ವಿನಂತಿ ಮಾಡಿಕೊಳ್ಳುವುದೇನೆಂದರೆ ನಿಮ್ಮ ನಿಮ್ಮ ಕ್ಷೇತ್ರದಲ್ಲಿ ಪಟ್ಟಿಮಾಡಿ ಸರ್ಕಾರಕ್ಕೆ ತಂದು ಕೊಡಲೇ ಬೇಕು, ಗೋಮಾಳ ಅಥವಾ ಬೇರೆ ಸರ್ಕಾರಿ ಜಮೀನನ್ನು ಸಾಗುವಳಿಗೆ ಕೊಡುವುದಕ್ಕೆ ಜಿಲ್ಲಾಧಿಕಾರಿಗಳಿಗೆ ಅಧಿಕಾರವಿಲ್ಲ. ಇದೊಂದು ಹೋರಾಟವೆಂದು ತಿಳಿದುಕೊಂಡು ಈ ಕೆಲಸವನ್ನು ಮಾಡಿದರೆ ಕೆಲವು ಜನಕ್ಕಾದರೂ ಕೂಡ ಭೂಮಿಯನ್ನು ಕೊಡುವುದಕ್ಕಾಗುತ್ತದೆ. ನಾವು ಬೇರೆ ಕಡೆ ಒಂದು ಯೂನಿಟ್‌ಗೆ 60 ಸಾವಿರದಂತೆ ಭೂಮಿಯನ್ನು ಖರೀದಿ ಮಾಡುತ್ತೇವೆ, ಆದರೆ ಈ ಜನಾಂಗಕ್ಕೆ ಒಂದು ಲಕ್ಷ ರೂಪಾಯಿಗೆ ಹೆಚ್ಚಿಸಿದ್ದೇವೆ, ಏಕೆಂದರೆ ದಕ್ಷಿಣ ಕನ್ನಡ ಭಾಗದಲ್ಲಿ ಭೂಮಿ ಸಿಗುವುದಿಲ್ಲ, ಬೆಲೆ ಜಾಸ್ತಿ ಇದೆ. ಮೊನ್ನೆ 3 ಜನಕ್ಕೆ ಕೊಡಿಸಿದ್ದೇವೆ, ಇನ್ನು ಸ್ವಲ್ಪ ಭೂಮಿ ಸಿಗುತ್ತದೆ, ಅದನ್ನು ಖರೀದಿ ಮಾಡುವುದಕ್ಕೆ ಹೇಳಿದ್ದೇನೆ. ಅವರಿಗೆ ಬೇರೆ ಬೇರೆ ಮೆಷಿನರಿನಲ್ಲಿ, ಫಿಟ್ಟರ್‌ನಲ್ಲಿ ಆಟೋರಿಕ್ಷಾ ಓಡಿಸುವುದರಲ್ಲಿ ಇತ್ಯಾದಿ ಕ್ಷೇತ್ರದಲ್ಲಿ ಉದ್ಯೋಗದಲ್ಲಿ ತರಬೇತಿ ಕೊಡಲು ವ್ಯವಸ್ಥೆಯನ್ನೂ ಕೂಡ ಮಾಡಿದ್ದೇವೆ. ಅವರಿಗೆ ಇನ್ನು 10 ಕೋಟಿ ರೂಪಾಯಿಗಳ ಯೋಜನೆಯನ್ನು ರೂಪಿಸಿ ಕೇಂದ್ರ ಸರ್ಕಾರಕ್ಕೆ ಕಳುಹಿಸುವಂತಹ ಕೆಲಸವನ್ನು ಮಾಡುತ್ತಿದ್ದೇವೆ. ನಾವೆಲ್ಲರೂ ಸೇರಿ ಆ ಒಂದು ವರ್ಗದ ಜನರನ್ನು ಮೇಲೆತ್ತತಕ್ಕಂತಹ ಕೆಲಸವನ್ನು ಇವತ್ತು ಮಾಡಬೇಕಾಗಿದೆ. ಆ ಒಂದು ಸಮಾಜ ಇನ್ನು ಕೂಡ ಅತ್ಯಂತ ಹೀನಸ್ಥಿತಿಯಲ್ಲಿರುವುದನ್ನು ನಾವು ಕಾಣುತ್ತಿದ್ದೇವೆ. ನನಗೆ ಈ ಕಾನೂನನ್ನು ಉಗ್ರವಾಗಿ ತರತಕ್ಕಂತಹ ಅಪೇಕ್ಷೆ ಇತ್ತು, ನನಗೆ ಗೊತ್ತಿದರೂ ಕೂಡ ಕೆಲವು ಭಾಗಗಳನ್ನು ಕೈಬಿಟ್ಟಿದ್ದೇನೆ. ಎಷ್ಟು ವಿಶೇಷವಾದಂತಹ ಅಪರಾಧವಾಗಬಹುದೋ ಅಷ್ಟಕ್ಕೆ ಸೀಮಿತಗೊಳಿಸಲಾಗಿದೆ. ಇಲ್ಲದಿದ್ದರೆ ಈ ಸಮಾಜದಲ್ಲಿ ಯಾರೋ ಒಳಿತಿಗಾಗಿ ಇವರೆಲ್ಲ ಹುಟ್ಟಿದ್ದಾರೆನೋ ಎನ್ನುವ ಭಾವನೆ ಬರುತ್ತದೆ. ಇನ್ನೊಬ್ಬರ ಮನೆಗೆ ಪೂಜೆ ಮಾಡುವುದಕ್ಕೆ, ಇವರೆ ಪತಕ್ಕಾಗಿ ಹೋಗಬೇಕು, ಬೇರೆಯವರು ಯಾತಕ್ಕೆ ಹೋಗಬಾರದು. ಆದ್ದರಿಂದ ಉಗ್ರತೆಯನ್ನು ಸ್ವಲ್ಪ ಕಡಿಮೆಗೊಳಿಸುವುದಕ್ಕೆ ತಂದಿದ್ದೇನೆ, ಕಾರಣವೇನೆಂದರೆ ಇದು ಒಂದು ಸಾಂಸ್ಕೃತಿಕ ಕಾರ್ಯಕ್ರಮವಾಗಬಹುದು, ಅದನ್ನು ಏಕೆ ಅಡಚಣೆಗೊಳಿಸಬೇಕು. ವಾದ ವಿತಂಡವಾದ ನಮ್ಮ ಸಮಾಜದಲ್ಲಿರುವಂತಹದ್ದು ಎಲ್ಲೆಲ್ಲಿಯೂ ಇಲ್ಲ. ಆದ್ದರಿಂದ ಕೆಲಸವನ್ನು ಇಲ್ಲಿ ತಂದಿದ್ದೇವೆ, ಇದರ ಬಗ್ಗೆ ಮಾನ್ಯ ಸುಳ್ಯದ ಶಾಸಕರು ಕೂಡ ಸಲಹೆಯನ್ನು ಕೊಟ್ಟಿದ್ದಾರೆ ಇದರ ಜೊತೆಗೆ ನಮ್ಮ ಚಾಮರಾಜನಗರ ಶಾಸಕರು ಕೂಡ ತಹ ಪದ್ಧತಿ ಬೇರೆ ಜನಾಂಗದಲ್ಲಿ ಇದ್ದರೂ ಕೂಡ ಈ ಕಾನೂನಿನ ವ್ಯಾಪ್ತಿಯನ್ನು

ವಿಸ್ತರಿಸಬೇಕೆನ್ನುವ ಸಲಹೆಯನ್ನು ಕೊಟ್ಟಿದ್ದಾರೆ ಅದು ಸೂಕ್ತವಾದಂತಹ ಸಲಹೆಯಾಗಿದೆ. ಒಟ್ಟಾರೆ ಈ ಒಂದು ವಿಧೇಯಕ ಸಣ್ಣದಾದರೂ, ಇದು ಯಾವತ್ತೋ ಈ ಸದನದ ಮುಂದೆ ಬರಬೇಕಾಗಿತ್ತು. ಆದರೂ ತಡವಾಗಿ ತಂದಿದ್ದೇವೆ. ಇಂತಹ ಇನ್ನು ಕೆಲವು ಪ್ರಕರಣಗಳು ಇವೆ. ಆದುದರಿಂದ ಈ ಒಂದು ವಿಧೇಯಕಕ್ಕೆ ಎಲ್ಲಾ ಸದಸ್ಯರು ಕೂಡ ಹೃತ್ಪೂರ್ವಕವಾದ ಬೆಂಬಲವನ್ನು ನೀಡಿದ್ದೀರಿ. ಈ ದಿಸೆಯಲ್ಲಿ ನಾವೆಲ್ಲಾ ಕಾರ್ಯೋನ್ಮುಖರಾಗಬೇಕು ಮತ್ತು ಮಾನ್ಯ ಸದಸ್ಯರುಗಳು ಹೇಳಿದಂತಹ ಸಲಹೆಗಳನ್ನು ಗಮನದಲ್ಲಿಟ್ಟುಕೊಂಡು ಆ ಜನಾಂಗದವರಿಗೆ ವಿದ್ಯಾಭ್ಯಾಸದ ಕ್ಷೇತ್ರದ ಬಗ್ಗೆ ಏನು ಹೇಳಿದ್ದಾರೆ, ಖಂಡಿತವಾಗಿ ಕೂಡ ಸೂರತ್ಕಲ್ ಕ್ಷೇತ್ರದಲ್ಲಿ ಒಂದು ಒಳ್ಳೆಯ ವಿದ್ಯಾರ್ಥಿ ನಿಲಯವನ್ನು1 ರಿಂದ 10ರವರೆಗೆ ಸ್ಥಾಪನೆ ಮಾಡಿದ್ದೇವೆ. ಎಲ್ಲೆಲ್ಲಿ ಅಗತ್ಯವಿದೆ ಅಲ್ಲಿ ಮಾಡಬೇಕು. ಆದರೆ ಕೆಲವು ಕಡೆ ಪದುವಿನಲ್ಲಿ ಇರುವುದನ್ನು ನಾವು ಬದಲಾವಣೆ ಮಾಡಿದ್ದೇವೆ. ಏಕೆಂದರೆ ಮಕ್ಕಳು ಅಲ್ಲಿ ಬರುವುದಿಲ್ಲ. ಆದುದರಿಂದ ಈ ಕೊರಗರ ಜನಾಂಗದವರಿಗೆ ವಿದ್ಯಾಭ್ಯಾಸ ಕ್ಷೇತ್ರದಲ್ಲಿ ಹೆಚ್ಚು ಪ್ರೋತ್ಸಾಹ ಕೊಡಬೇಕು ಎನ್ನುವ ಉದ್ದೇಶ ಇದೆ. ಎಲ್ಲಿ ಸಾಕಷ್ಟು ಮಕ್ಕಳು ಸಿಗುತ್ತಾರೆ ಅಂತಹ ಕಡೆ ನಾವು ವಿದ್ಯಾಭ್ಯಾಸಕ್ಕೆ ಬೇಕಾದಂತಹ ಸವಲತ್ತುಗಳನ್ನು ಕೊಟ್ಟು, ವಿದ್ಯಾರ್ಥಿ ನಿಲಯವನ್ನು ತೆರೆಯುವುದಕ್ಕೆ ಯಾವ ತೊಂದರೆ ಇಲ್ಲ. ತಮ್ಮೆಲ್ಲರ ಸಹಕಾರವನ್ನು ಈ ದಿಸೆಯಲ್ಲಿ ಬಯಸುತ್ತಾ ಈ ವಿಧೇಯಕಕ್ಕೆ ತಾವುಗಳು ಸರ್ವಾನುಮತದಿಂದ ಅಂಗೀಕಾರ ನೀಡಬೇಕೆಂದು ಕೇಳಿಕೊಳ್ಳುತ್ತೇನೆ.

ಅಧ್ಯಕ್ಷರು : ಈಗ ಪ್ರಸ್ತಾವವನ್ನು ಸಭೆಯ ಮತ್ತಕ್ಕೆ ಹಾಕುತ್ತೇನೆ. ಪ್ರಸ್ತಾವ ಏನೆಂದರೆ "2000ನೇ ಸಾಲಿನ ಕರ್ನಾಟಕ ಕೊರಗರ (ಅಜಲು ಪದ್ಧತಿ ನಿಷೇಧ) ವಿಧೇಯಕವನ್ನು ಪರ್ಯಾಲೋಚಿಸುವುದು"

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

ಖಂಡ : 1

ಶ್ರೀ ಕಾಗೋಡು ತಿಮ್ಮಪ್ಪ (ಸಮಾಜ ಕಲ್ಯಾಣ ಸಚಿವರು) : ಮಾನ್ಯ ಅಧ್ಯಕ್ಷರೆ, "2000ನೇ ಸಾಲಿನ ಕರ್ನಾಟಕ ಕೊರಗರ (ಅಜಲು ಪದ್ಧತಿ ನಿಷೇಧ) ವಿಧೇಯಕದ ಖಂಡ 1ಕ್ಕೆ ನಾನು ಈ ಕೆಳಕಂಡ ತಿದ್ದುಪಡಿಯನ್ನು ಮಂಡಿಸುತ್ತೇನೆ." "ಸದರಿ ವಿಧೇಯಕದಲ್ಲಿ, 1ನೇ ಖಂಡದಲ್ಲಿ (3)ನೇ ಉಪ ಖಂಡದಲ್ಲಿ "ಇದು ಕೂಡಲೇ ಜಾರಿಗೆ ಬರತಕ್ಕದ್ದು" ಎಂಬ ಪದಗಳಿಗೆ "ಇದು 2000 ಆಗಸ್ಟ್ 17ನೇ ದಿನಾಂಕದಿಂದ ಜಾರಿಗೆ ಬಂದಿರುವುದಾಗಿ ಭಾವಿಸತಕ್ಕದ್ದು ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು"

ಪ್ರಸ್ತಾವ ಮಂಡಿಸಲಾಯಿತು

ಅಧ್ಯಕ್ಷರು : ಪ್ರಸ್ತಾವ ಏನೆಂದರೆ, "ಸದರಿ ವಿಧೇಯಕದಲ್ಲಿ, 1ನೇ ಖಂಡದಲ್ಲಿ (3)ನೇ ಉಪ ಖಂಡದಲ್ಲಿ "ಇದು ಕೂಡಲೇ ಜಾರಿಗೆ ಬರತಕ್ಕದ್ದು" ಎಂಬ ಪದಗಳಿಗೆ "ಇದು 2000 ಆಗಸ್ಟ್ 17ನೇ ದಿನಾಂಕದಿಂದ ಜಾರಿಗೆ ಬಂದಿರುವುದಾಗಿ ಭಾವಿಸತಕ್ಕದ್ದು" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು"

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

ಶ್ರೀ ಕಾಗೋಡು ತಿಮ್ಮಪ್ಪ : ಮಾನ್ಯ ಅಧ್ಯಕ್ಷರೆ, ಇದು ಸುಗ್ರೀವಾಜ್ಞೆ ತಂದಾಗ ಜಾರಿಗೆ ಬಂದಿತ್ತು. ಈಗ ವಿಧೇಯಕ ಬಂದಿದ್ದರಿಂದ ಆ ತಾರೀಖಿನಿಂದ ಜಾರಿಗೆ ಬಂದಿದೆ. ಅಷ್ಟೇ ಸೇರಿಸಿರುವುದು.

ಖಂಡ 1 ತಿದ್ದುಪಡಿಯಾದ ರೀತಿಯಲ್ಲಿ

ಅಧ್ಯಕ್ಷರು : ಪ್ರಸ್ತಾವ ಏನೆಂದರೆ, "ಖಂಡ 1 ತಿದ್ದುಪಡಿಯಾದಂತಹ ಈ ವಿಧೇಯಕದ ಅಂಗವಾಗಿರುತ್ತದೆ"

(ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಖಂಡ 1 ತಿದ್ದುಪಡಿಯಾದಂತೆ ವಿಧೇಯಕಕ್ಕೆ ಸೇರಿಸಲ್ಪಟ್ಟಿತು)

6ನೇ ಖಂಡದ ತರುವಾಯ

ಖಂಡ 7

ಶ್ರೀ ಕಾಗೋಡು ತಿಮ್ಮಪ್ಪ (ಸಮಾಜ ಕಲ್ಯಾಣ ಸಚಿವರು) : ಮಾನ್ಯ ಅಧ್ಯಕ್ಷರೆ, 6ನೇ ಖಂಡದ ತರುವಾಯ, ಈ ಮುಂದಿನದನ್ನು ಸೇರಿಸತಕ್ಕದ್ದು, "7. ನಿರಸನ ಮತ್ತು ಉಳಿಸುವಿಕೆಗಳು :

1) ಕರ್ನಾಟಕ ಕೊರಗರ (ಅಜಲು ಪದ್ಧತಿ ನಿಷೇಧ) ಅಧ್ಯಾದೇಶ 2000ವನ್ನು (2000ದ ಕರ್ನಾಟಕ ಅಧ್ಯಾದೇಶ ಸಂಖ್ಯೆ :7) ಈ ಮೂಲಕ ನಿರಸನಗೊಳಿಸಲಾಗಿದೆ.

2) ಹಾಗೆ ನಿರಸನಗೊಂಡಿದ್ದಾಗ್ಯೂ ಸದರಿ ಅಧ್ಯಾದೇಶದ ಅಡಿಯಲ್ಲಿ ಮಾಡಿದ ಯಾವುದೇ ಕಾರ್ಯ ಅಥವಾ ಕೈಗೊಂಡ ಯಾವುದೇ ಕ್ರಮವನ್ನು ಈ ಅಧಿನಿಯಮದ ಅಡಿಯಲ್ಲಿ ಮಾಡಲಾಗಿದೆ ಅಥವಾ ಕೈಗೊಳ್ಳಲಾಗಿದೆ ಎಂದು ಭಾವಿಸತಕ್ಕದ್ದು"

ಪ್ರಸ್ತಾವ ಮಂಡಿಸಲಾಯಿತು

ಅಧ್ಯಕ್ಷರು : ಪ್ರಸ್ತಾವ ಏನೆಂದರೆ, "7. ನಿರಸನ ಮತ್ತು ಉಳಿಸುವಿಕೆಗಳು :

1) ಕರ್ನಾಟಕ ಕೊರಗರ (ಅಜಲು ಪದ್ಧತಿ ನಿಷೇಧ) ಅಧ್ಯಾದೇಶ 2000ವನ್ನು (2000ದ ಕರ್ನಾಟಕ ಅಧ್ಯಾದೇಶ ಸಂಖ್ಯೆ :7) ಈ ಮೂಲಕ ನಿರಸನಗೊಳಿಸಲಾಗಿದೆ.

2) ಹಾಗೆ ನಿರಸನಗೊಂಡಿದ್ದಾಗ್ಯೂ ಸದರಿ ಅಧ್ಯಾದೇಶದ ಅಡಿಯಲ್ಲಿ ಮಾಡಿದ ಯಾವುದೇ ಕಾರ್ಯ ಅಥವಾ ಕೈಗೊಂಡ ಯಾವುದೇ ಕ್ರಮವನ್ನು ಈ ಅಧಿನಿಯಮದ ಅಡಿಯಲ್ಲಿ ಮಾಡಲಾಗಿದೆ ಅಥವಾ ಕೈಗೊಳ್ಳಲಾಗಿದೆ ಎಂದು ಭಾವಿಸತಕ್ಕದ್ದು"

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

ಖಂಡ 7

ಅಧ್ಯಕ್ಷರು : ಪ್ರಸ್ತಾವ ಏನೆಂದರೆ "ಹೊಸ ಖಂಡ 7 ಈ ವಿಧೇಯಕದ ಅಂಗವಾಗಿರುತ್ತದೆ".

(ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಹೊಸ ಖಂಡ 7 ವಿಧೇಯಕಕ್ಕೆ ಸೇರಿಸಲ್ಪಟ್ಟಿತು)

ಖಂಡ 2 ರಿಂದ 6 ರವರೆಗೆ

ಅಧ್ಯಕ್ಷರು "ಖಂಡ 2 ರಿಂದ 6ರವರೆಗೆ ಎರಡೂ ಸೇರಿದಂತೆ ಈ ವಿಧೇಯಕದ ಅಂಗವಾಗಿರುತ್ತದೆ".

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(ಖಂಡ 2 ರಿಂದ 6ರವರೆಗೆ ಎರಡೂ ಸೇರಿದಂತೆ ವಿಧೇಯಕಕ್ಕೆ ಸೇರಿಸಲಾಯಿತು)

ಖಂಡ 7

ಅಧ್ಯಕ್ಷರು : "ಹೊಸ ಖಂಡ 7 ಈ ವಿಧೇಯಕದ ಅಂಗವಾಗಿರುತ್ತದೆ"

(ಪ್ರಸ್ತಾವ ಅಂಗೀಕರಿಸಲ್ಪಟ್ಟಿತು)

(ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಹೊಸ ಖಂಡ 7 ವಿಧೇಯಕಕ್ಕೆ ಸೇರಿಸಲ್ಪಟ್ಟಿತು)

ಖಂಡ 1

ಅಧ್ಯಕ್ಷರು : ಪ್ರಸ್ತಾವ ಏನೆಂದರೆ, "ಮೊದಲನೆ ಖಂಡ, ಹೆಸರು, ಅವತರಣಿಕೆಗಳು ವಿಧೇಯಕದ ಭಾಗವಾಗಿರುತ್ತದೆ".

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(ಮೊದಲನೇ ಖಂಡ, ಹೆಸರು ಮತ್ತು ಅವತರಣಿಕೆಗಳು. ವಿಧೇಯಕದ ಭಾಗವಾಗಿರುತ್ತದೆ.)

ಪ್ರಸ್ತಾವದ ಅಂಗೀಕಾರ

ಶ್ರೀ ಕಾಗೋಡು ತಿಮ್ಮಪ್ಪ (ಸಮಾಜ ಕಲ್ಯಾಣ ಸಚಿವರು) : ಮಾನ್ಯ ಅಧ್ಯಕ್ಷರೆ, 2000ದ ಕರ್ನಾಟಕ ಕೊರಗರ (ಅಜಲು ಪದ್ಧತಿ ನಿಷೇಧ) ವಿಧೇಯಕ (ತಿದ್ದುಪಡಿ) ಅಂಗೀಕರಿಸಬೇಕೆಂದು ಕೋರುತ್ತೇನೆ.

ಅಧ್ಯಕ್ಷರು : ಪ್ರಸ್ತಾವ ಏನೆಂದರೆ, "2000ದ ಕರ್ನಾಟಕ ಕೊರಗರ (ಅಜಲು ಪದ್ಧತಿ ನಿಷೇಧ) ವಿಧೇಯಕ (ತಿದ್ದುಪಡಿ) ವಿಧೇಯಕವನ್ನು ತಿದ್ದುಪಡಿ ಮಾಡಿರುವಂತೆ ಅಂಗೀಕರಿಸುವುದು"

ಪ್ರಸ್ತಾವ ಸರ್ವಾನುಮತದಿಂದ ಅಂಗೀಕರಿಸಲ್ಪಟ್ಟಿತು ಮತ್ತು ಮಸೂದೆಗೆ ಒಪ್ಪಿಗೆ ನೀಡಲಾಯಿತು

ಅಧ್ಯಕ್ಷರು : ನಿನ್ನೆ ದಿವಸ ಏನು ಬೆಲೆ ಕುಸಿತದ ಬಗ್ಗೆ ಮಾನ್ಯ ಸದಸ್ಯರುಗಳು ಮಾತನಾಡುತ್ತಿದ್ದರು ಅದನ್ನೆ ಈಗ ಮುಂದುವರೆಸೋಣ. ಅದು ಮುಗಿದ ಮೇಲೆ ರಾಜ್ಯದಲ್ಲಿ ಕಾನೂನು ಮತ್ತು ಸುವ್ಯವಸ್ಥೆ ಕುಸಿದಿರುವ ಬಗ್ಗೆ ತೆಗೆದುಕೊಳ್ಳೋಣ. ನಾಳೆ ದಿವಸಕ್ಕೆ ಆ ಎರಡನ್ನು ಸಹ ಚರ್ಚೆಗೆ ಹಾಕಿಕೊಂಡಿದ್ದೇವೆ.

ಶ್ರೀ ಮಲ್ಲಿಕಾರ್ಜುನ ಎಂ. ಖರ್ಗೆ : ಮಾನ್ಯ ಅಧ್ಯಕ್ಷರೆ, ನನಗೆ ಸಂಬಂಧಪಟ್ಟ ಹಾಗೆ ಒಂದು ಸಣ್ಣ ಬಿಲ್ ಇದೆ. ಅದನ್ನು ಈಗ ತೆಗೆದುಕೊಳ್ಳೋಣ.

ಕರ್ನಾಟಕ ಕಳ್ಳಭಟ್ಟಿ ವ್ಯಾಪಾರಿಗಳ, ಮಾದಕ ವಸ್ತು ಅಪರಾಧಿಗಳ ಜೂಜುಕೋರರ ಗೂಂಡಾಗಳ, ಅನೈತಿಕ ವ್ಯವಹಾರ ಅಪರಾಧಿಗಳ ಮತ್ತು ಕೊಳಚೆ ಕಬಳಿಸುವವರ ಅಪಾಯಕಾರಿ ಚಟುವಟಿಕೆಗಳ ಪ್ರತಿಬಂಧಕ (ತಿದ್ದುಪಡಿ) ವಿಧೇಯಕ, 2000 ಪರ್ಯಾಲೋಚನಾ ಪ್ರಸ್ತಾವ

ಶ್ರೀ ಮಲ್ಲಿಕಾರ್ಜುನ ಖರ್ಗೆ (ಗೃಹ ಸಚಿವರು) : ಮಾನ್ಯ ಅಧ್ಯಕ್ಷರೆ, 2000ದ ಕರ್ನಾಟಕ ಕಳ್ಳಭಟ್ಟಿ ವ್ಯಾಪಾರಿಗಳ, ಮಾದಕ ವಸ್ತು ಅಪರಾಧಿಗಳ ಜೂಜುಕೋರರ, ಗೂಂಡಾಗಳ, ಅನೈತಿಕ ವ್ಯವಹಾರ ಅಪರಾಧಿಗಳ ಮತ್ತು ಕೊಳಚೆ ಪ್ರದೇಶಗಳನ್ನು ಕಬಳಿಸುವವರ ಅಪಾಯಕಾರಿ ಚಟುವಟಿಕೆಗಳ ಪ್ರತಿಬಂಧಕ (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.

ಪ್ರಸ್ತಾವವನ್ನು ಮಂಡಿಸಲಾಯಿತು

ಶ್ರೀ ಮಲ್ಲಿಕಾರ್ಜುನ ಖರ್ಗೆ : ಈ ವಿಧೇಯಕದಲ್ಲಿ ಒಂದು ಚಿಕ್ಕ ತಿದ್ದುಪಡಿ ಮಾಡಬೇಕು. ಈಗಿರುವ ಇಂಡಿಯನ್ ಪೀನಲ್ ಕೋಡ್‌ನಲ್ಲಿ ಇರತಕ್ಕಂಥ ಚಾಪ್ಟರ್ 8 ಮತ್ತು 15 ಇದನ್ನು ಕೂಡ ಇದರಲ್ಲಿ ಸೇರಿಸಬೇಕು. ಹಿಂದೆ ಯಾವರೀತಿಯಾಗಿ ಈ ಆಕ್ಟ್‌ನಲ್ಲಿ ಚಾಪ್ಟರ್ 16, 17 ಮತ್ತು 22 ಇಂಡಿಯನ್ ಪೀನಲ್ ಕೋಡ್ ಕಾನೂನಿನ ಅಂಗವಾಗಿತ್ತು. ಈ ಕಾನೂನು ಚಾಪ್ಟರ್ 7 ಮತ್ತು 15 ಕೂಡ ಇದರಲ್ಲಿ ಅಳವಡಿಸಬೇಕು ಮತ್ತು ಆ ಕೆಳಗಡೆ ಬರತಕ್ಕಂಥ ಯಾವುದು ಅಫೆನ್ಸೆಸ್ ಇದೆ ಅವೆಲ್ಲವೂ ಕೂಡ ಕಾನೂನು ಅಡಿಯಲ್ಲಿ ಬರಬೇಕು ಎನ್ನುವುದು ಒಂದು ಸಣ್ಣ ತಿದ್ದುಪಡಿ. ಇದು ಮೊದಲೆ ಅಪ್ರೂವ್ ಆಗಿತ್ತು, ಇದನ್ನು ತಮ್ಮ ಗಮನಕ್ಕೆ ತರುತ್ತಿದ್ದೇನೆ.

+ ಶ್ರೀ ಪಿ.ಜಿ.ಆರ್. ಸಿಂಧ್ಯಾ (ಕನಕಪುರ) : ಮಾನ್ಯ ಅಧ್ಯಕ್ಷರೆ, ಮಾನ್ಯ ಗೃಹಸಚಿವರು ಮಂಡಿಸಿರತಕ್ಕಂಥ ಈ ವಿಧೇಯಕವನ್ನು ನಾನು ಸ್ವಾಗತ ಮಾಡಿ ಒಂದೆರಡು ವಿಚಾರಗಳನ್ನು ನಾನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಬಯಸುತ್ತೇನೆ. ಮೊದಲನೆಯದಾಗಿ ಈ ಒಂದು ವಿಧೇಯಕವನ್ನು ನಮ್ಮ ಸರ್ಕಾರ ಇದಂತಹ ಸಂದರ್ಭದಲ್ಲಿ ಇದನ್ನು ಮಾಡಬೇಕು, ಅದರಲ್ಲೂ ವಿಶೇಷವಾಗಿ ಮಹಾರಾಷ್ಟ್ರದಲ್ಲಿ ಇರತಕ್ಕಂಥ ಈ ರೀತಿಯ ವ್ಯವಹಾರಗಳು ಏನಿವೆ ಅದರ ಮಾದರಿಯಲ್ಲೇ ಮಾಡಬೇಕೆಂದು ಇದ್ದೆವು.